# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 103 Issue: 103 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 19.10.2024 19.10.2024 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2






HAMPI TIMES VIJAYANAGARA

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ಚಿಕ್ಕ ಮೊತ್ತ ದೊಡ್ಡ ಜಾಹೀರಾತು

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ

95 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು

94486 33038 hampitimes@gmail.com

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ


ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ

Print & Digital News Paper

ಹಂಪಿ ಟೈಮ್ಸ್ ಇ-ಪೇಪರ್

ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


## ಆನಂದ ಬಾಣ




## ಮೈಕ್ರೋ ನ್ಯೂಸ್

### ಅ.19 ರಂದು ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕಾರ್ಯ ಮತ್ತು ಪಾಲನಾ ಉಪವಿಭಾಗ ಹೊಸಪೇಟೆ ಕಚೇರಿ ವ್ಯಾಪ್ತಿಯ ನಗರ ಉಪವಿಭಾಗ–1 ಮತ್ತು ನಗರ ಉಪವಿಭಾಗ–2 ರ ಗ್ರಾಹಕರ ಕುಂದು ಕೊರತೆ ಹಾಗೂ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸಲು ಪ್ರತಿ ತಿಂಗಳು ಗ್ರಾಹಕರ ಸಂವಾದ ಸಭೆಯನ್ನು ಅ. 19 ರಂದು ಮಧ್ಯಾಹ್ನ 3.30 ರಿಂದ 5 ಗಂಟೆಯವರೆಗೆ ನಗರ ಉಪವಿಭಾಗ–1ರ ಕಚೇರಿಯಲ್ಲಿ ಆಯೋಜಿಸಲಾಗಿದೆ. ಸಾರ್ವಜನಿಕರು ಸಭೆಗೆ ಭಾಗವಹಿಸಿ ತಮ್ಮ ಕುಂದು ಕೊರತೆ ಬಗೆಹರಿಸಿಕೊಳ್ಳಬೇಕೆಂದು ಉಪ ವಿಭಾಗದ ಎಇಇ ತಿಳಿಸಿದ್ದಾರೆ.






# ಭಾರತದ ಮಣ್ಣಿನಲ್ಲಿದೆ ಆಧ್ಯಾತ್ಮದ ಗುಣ

## ಹೆಬ್ಬಳ್ಳಿ ಶ್ರೀಕ್ಷೇತ್ರದ ಪರಮಪೂಜ್ಯ ದತ್ತಾವದೂತರ ಹೇಳಿಕೆ | ಹಂಸಾಂಬ ಶಾರದಾಶ್ರಮದ ನೂತನ ಕಟ್ಟಡದ ಭೂಮಿ ಪೂಜೆ ಶಾಸಕ ಎಚ್.ಆರ್.ಗವಿಯಪ್ಪರಿಂದ ಕಟ್ಟಡಕ್ಕೆ 5 ಲಕ್ಷ ರೂ ದೇಣಿಗೆ | ಉಪನಿಷತ್ ಚಿಂತನೆ ನಮ್ಮ ಉಸಿರಾಗಿಸಿಕೊಳ್ಳಬೇಕು

**ಹಂಪಿ ಟೈಮ್ಸ್ ಹೊಸಪೇಟೆ**

ಭಾರತದ ಮಣ್ಣಿನ ಕಣಕಣದಲ್ಲೂ ಆಧ್ಯಾತ್ಮದ ಶಕ್ತಿ ಇದೆ. ಆಧ್ಯಾತ್ಮಿಕದತ್ತ ಮುಖ ಮಾಡದೇ ಹೋದರೆ ಜೀವನ ಅರ್ಥಪೂರ್ಣವಾಗದು. ಐಷರಾಮಿ ಜೀವನದ ಬೆನ್ನತ್ತಿ ಹಣ ಸಂಪಾದನೆಯಲ್ಲೇ ತೊಡಗಿ ಗಳಿಸಿದವರು ಇಂದು ನೆಮ್ಮದಿಯನ್ನ ಹುಡುಕಾಡುತ್ತಿದ್ದಾರೆ. ಪ್ರತಿಯೊಬ್ಬರೂ ಭಾರತೀಯ ಸಂಸ್ಕೃತಿಯನ್ನು ಅಪ್ಪಿಕೊಂಡು ಅನುಸರಿಸಿದಾಗ ಬದುಕು ಶಾಂತಿ ನೆಮ್ಮದಿಯಿಂದ ತುಂಬಿರುತ್ತದೆ ಎಂದು ಹೆಬ್ಬಳ್ಳಿ ಶ್ರೀಕ್ಷೇತ್ರದ ಪರಮಪೂಜ್ಯ ದತ್ತಾವದೂತರು ಆಶೀರ್ವಚನ ನೀಡಿದರು.

ನಗರದ ಅನಂತಶಯನಗುಡಿ ರೈಲ್ವೆಗೇಟ್ ಪಕ್ಕದ ಶಿವಶಕ್ತಿನಗರ ಸಂತ ರಾಜಾರಾಮ್‌ಜಿ ಕಲ್ಯಾಣಮಂಟಪದ ಬಳಿ ನೂತನ ನಿವೇಶನದಲ್ಲಿ ಹಂಸಾಂಬ ಶಾರದಾಶ್ರಮದ ನೂತನ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ಸಮಾರಂಭದಲ್ಲಿ ಶುಕ್ರವಾರ ಮಾತನಾಡಿದರು. ಭಾರತೀಯ ಸಂಸ್ಕೃತಿಯನ್ನು ವಿದೇಶಿಗರು ಅಳವಡಿಸಿಕೊಂಡು ಆನಂದದಿಂದ ಬಾಳುತ್ತಾ, ಕೊಂಡಾಡುತ್ತಿದ್ದಾರೆ. ಆದರೆ ನಮ್ಮ ಸಂಸ್ಕೃತಿಯ ಬಗ್ಗೆ ನಮ್ಮ ಯುವ ಪೀಳಿಗೆಗೆ ತಿಳಿಸಿಕೊಡುವ ಪ್ರಯತ್ನ ಮಾಡದಿರುವುದು ವಿಪರ್ಯಾಸ. ಅನೇಕರು ತಮ್ಮ ಬದುಕಿಗಾಗಿ ಸಂಘರ್ಷದ ಹೋರಾಟ ನಡೆಸುತ್ತಿದ್ದಾರೆ. ಹೊಸಪೇಟೆ ಹಂಸಾಂಬ ಶಾರದಾಶ್ರಮದ ಅಧ್ಯಕ್ಷರಾದ ಮಾತಾಜಿ ಪ್ರಬೋಧಮಯಿ ಅವರು ತ್ಯಾಗ ಮತ್ತು ಸೇವೆಗಳಿಂದ ಲೋಕಕಲ್ಯಾಣಕ್ಕಾಗಿ ತಮ್ಮ ಜೀವನವನ್ನೆ ಮೀಸಲಿಟ್ಟು ಆದರ್ಶವಾಗಿದ್ದಾರೆ. ಅವರ 15 ವರ್ಷಗಳ ನಿರಂತರ ಪರಿಶ್ರಮ ಮತ್ತು ತಾಳ್ಮೆಯ ಫಲವಾಗಿ ಇಂದು ನೂತನ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿದೆ. ಸಮಾಜ ಮತ್ತು ದೇಶಕ್ಕಾಗಿ ಬದುಕಿದವರು ಅಮರರಾಗಿದ್ದಾರೆ. ಭಗವಂತನ ಧ್ಯಾನ, ನಾಮಸ್ಮರಣೆ, ಸತ್ಸಂಗಗಳಲ್ಲಿ ಭಾಗಿಯಾಗುವ ಮೂಲಕ ನಿಮ್ಮ ಬದುಕನ್ನು ಅರ್ಥಪೂರ್ಣವಾಗಿಸಿಕೊಳ್ಳಿ ಎಂದರು.

ರಾಣಿಬೆನ್ನೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ಪ್ರಕಾಶಾನಂದಜೀ ಮಹಾರಾಜ್ ಮಾತನಾಡಿ, ಹಣದಿಂದ ಎಲ್ಲವನ್ನೂ ಪಡೆದಿದ್ದೇವೆ ಎನ್ನಬಹುದು ಆದರೆ ಅಂತರಾತ್ಮ ಶಾಂತಿಯ ಹುಡುಕಾಟದಲ್ಲಿರುತ್ತದೆ. ಸತ್ಪುರುಷರ ಆಶೀರ್ವಚನ ಕೇಳಿ, ಪಾಲಿಸಲು ಮುಂದಾದರೆ, ನಮ್ಮೊಳಗಿನ ಅಹಂಕಾರ ನಮಗರಿವಿಲ್ಲದಂತೆ ಹೊರನಡೆಯುತ್ತಿದೆ.






ಎಲ್ಲಾ ತಿಳಿದುಕೊಂಡಿದ್ದೇವೆ ಎಂಬ ಅಹಂಕಾರದಿಂದ ಹೊರಬರಬೇಕು. ಪ್ರತಿಯೊಬ್ಬರ ಜೀವನದಲ್ಲಿ ಹೊಸ ಪ್ರಯತ್ನಗಳು ನಡೆಸಿದಾಗ ಜನರು ಮೊದಲಿಗೆ ಅನುಮಾನ ವ್ಯಕ್ತಪಡಿಸುತ್ತಾರೆ, ನಂತರ ಅಪಮಾನ ಮಾಡುತ್ತಾರೆ. ಎರಡನ್ನೂ ದಾಟಿ ತನ್ನ ಕಾಯಕದಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಹೋದವರಿಗೆ ಸನ್ಮಾನಗಳು ಪ್ರಾಪ್ತಿಯಾಗುತ್ತವೆ ಎಂದರು.

ವಿಜಯಪುರ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ನಿರ್ಭಯಾನಂದಜಿ ಮಹಾರಾಜ್ ಮಾತನಾಡಿ, ಇತಿಹಾಸವನ್ನು ತಿಳಿಯದವನು ಇತಿಹಾಸ ನಿರ್ಮಿಸಲಾರ ಎಂಬುದ ವಿದೇಶಿಗನ ಮಾತು ಸತ್ಯ ಹಿರಿಯರು ಭಾರತದ ಇತಿಹಾಸವನ್ನು ಸರಿಯಾಗಿ ಹೇಳದಿರುವುದೇ ನಮ್ಮ ಅಭಿವೃದ್ಧಿಗೆ ಹಿನ್ನಡೆ. ಸಮಷ್ಟಿ ಭಾವದಿಂದ ಭಾರತದ ಇತಿಹಾಸ ತಿಳಿಸುವ ಪ್ರಯತ್ನಗಳು ನಡೆದಿಲ್ಲ. ವಿದೇಶಿಗರು ಭಾರತದ ಇತಿಹಾಸವನ್ನು ರೋಚಕವಾಗಿ ಹೇಳಿದರೆ, ಭಾರತೀಯರು ಕಣ್ಣರಳಿಸಿ ಕಿವಿಗೊಟ್ಟು ಕೇಳುವ ದಿನಗಳಲ್ಲಿ ನಾವಿರುವುದು ದುರ್ದೈವ. ವಿವೇಕಾನಂದರನ್ನು ಪ್ರತಿಯೊಬ್ಬರೂ ಓದಿ ತಿಳಿದುಕೊಂಡಾಗ ಭಾರತದ ದರ್ಶನವಾಗಲಿದೆ. ವಿವೇಕಾನಂದರು ಬಯಸಿದ್ದು ಕೇವಲ ತ್ಯಾಗ ಮತ್ತು ಸೇವೆ. ಇವರೆಡರಿಂದ ಭಾರತವನ್ನು ಸರ್ವತೋಮುಖವಾಗಿ ಅಭಿವೃದ್ಧಿಗೊಳಿಸಬಹುದಾಗಿದೆ. ಮನುಷ್ಯ ಸತ್ಯದ ಹಾದಿಯಲ್ಲಿ ನಡೆದಾಗ ಸಮಾಜಕ್ಕೆ ನಾನಾಸೌಲಭ್ಯಗಳು ಲಭಿಸುತ್ತವೆ. ಉಪನಿಷತ್ ಚಿಂತನೆ ನಮ್ಮ ಉಸಿರಾಗಬೇಕು. ಮಹಾತ್ಮರ ಜೀವನವೇ ನಮಗೆಲ್ಲರಿಗೆ ದಾರಿದೀಪವಾಗಬೇಕು. ಹೊಸದಾಗ ನಿರ್ಮಾಣವಾಗುವ ಶಾರದಾಶ್ರಮದಲ್ಲಿ ಆಧ್ಯಾತ್ಮಿಕ ಚಿಂತನೆಗಳ ಜೊತೆ ಮಕ್ಕಳಿಗೆ ಸಂಸ್ಕೃತ, ಸಂಸ್ಕಾರಯುತ ವಿದ್ಯಾದಾನ, ಧ್ಯಾನ, ತಪಸ್ಸು ನಡೆಯಲಿವೆ. ನಿಮ್ಮ ಮಕ್ಕಳನ್ನು ಆಶ್ರಮಕ್ಕೆ ಕರೆತರುವ ಮೂಲಕ ಮಕ್ಕಳಲ್ಲಿ ಸಂಸ್ಕಾರ ಬೆಳೆಸಬೇಕು ಎಂದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ,. ಸತ್ಕಾರ್ಯಗಳನ್ನು ಮಾಡಲು ಹಣವೇ ಬೇಕಾಗಿಲ್ಲ. ಇನ್ನೊಬ್ಬರ ಏಳಿಗೆಯನ್ನು ಸಹಿಸಿಕೊಳ್ಳಲಾರದೆ, ಅವರನ್ನು ಉಸಿರುಕಟ್ಟಿಸುವ ವಾತವರಣಕ್ಕೆ ತಳ್ಳುವ ಯತ್ನಗಳು ಎಂದಿಗೂ ಮಾನಸಿಕ ಶಾಂತಿ ತರಲಾರವು. ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ಭಾರವನ್ನು ತಗ್ಗಿಸಿಕೊಳ್ಳಬಹುದು. ಜೀವನದಲ್ಲಿ ಎದುರಾಗುವ ಕಷ್ಟ, ನಷ್ಟ, ಸುಖ, ದುಃಖ, ಯಶಸ್ಸು ಅಂದಿಗೆ ಮಾತ್ರ ಅನುಭವಿಸಿ ಮರೆಯಬೇಕು. ಶಾರದಾಶ್ರಮಕ್ಕೆ ಭೂಮಿ ನೀಡುವಲ್ಲಿ ಕಾನೂನಿನ ಚೌಕಟ್ಟಿನೊಳಗೆ ಏನು ಮಾಡಲು ಸಾಧ್ಯವಿದೆಯೋ ಅದನ್ನು ಮಾತ್ರ ಮಾಡಿದ್ದೇನೆ. ನಾನು ನನ್ನ ಕರ್ತವ್ಯವನ್ನು ಮಾತ್ರ ಮಾಡಿದ್ದೇನೆ ಎಂದರು.

ಶಾರದಾಶ್ರಮದ ಮಾತಾಜಿ ಪ್ರಬೋಧಮಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಮೇಧಾನಂದಜೀ ಮಹಾರಾಜ್, ಗೋಕಾಕ್‌ನ ಶಾರದಾ ಶಕ್ತಿಪೀಠ ಮಾತಾ ಶಿವಮಯಿ, ವಿಜಯಪುರ ಕೃಪಾಮಯಿ ಶಾರದಾಶ್ರಮದ ಮಾತಾ ಕೈವಲ್ಯಮಹಿ ಇತರರು ಉಪಸ್ಥಿತರಿದ್ದರು.

> ವಿಜಯನಗರ ಭಕ್ತಿಯ ನೆಲವಾಗಿದೆ. ಶಾರದಾಶ್ರಮದ ಕಟ್ಟಡ ನಿರ್ಮಾಣಕ್ಕೆ 5 ಲಕ್ಷ ರೂಗಳನ್ನು ವೈಯಕ್ತಿಕವಾಗಿ ನೀಡುತ್ತೇನೆ. ಮಕ್ಕಳಿಗೆ ನೈತಿಕ ಶಿಕ್ಷಣದ ಅಗತ್ಯವಿದೆ. ಸರ್ಕಾರದಿಂದ ದೊರೆಯಬಹುದಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗುವುದು.
>
> – ಎಚ್.ಆರ್.ಗವಿಯಪ್ಪ
> ಶಾಸಕ, ವಿಜಯನಗರ.

> ಮನುಷ್ಯ ಅಹಂಕಾರದಿಂದ ಹೊರಬರಬೇಕಾದರೆ ಸತ್ಪುರುಷರ ಮತ್ತು ತ್ಯಾಗ ಜೀವಗಳ ದರ್ಶನ ಪಡೆದು, ಆಶೀರ್ವಚನ ಕೇಳಬೇಕು. ಆಧ್ಯಾತ್ಮಿಕ ಚಿಂತನೆಗಳನ್ನು ಕೇಳುವುದರಿಂದ, ಸತ್ಪುರುಷರ ಅದರ್ಶಗಳನ್ನು ಅಳವಡಿಸಿಕೊಂಡಾಗ ಸಾರ್ಥಕ ಜೀವನ ನಮ್ಮದಾಗಿಸಿಕೊಳ್ಳಬಹುದು
>
> – ಎಂ.ಎಸ್.ದಿವಾಕರ,
> ಜಿಲ್ಲಾಧಿಕಾರಿ, ವಿಜಯನಗರ

> ಮನುಷ್ಯನಲ್ಲಿ ಮಾನವೀಯತೆ ಮತ್ತು ಸಂಸ್ಕಾರಗಳಿದ್ದರೆ ಸಾಧ್ಯವಾಗದು ಎಂಬುವುದನ್ನೂ ಸಾಧಿಸಿತೋರಿಸಬಹುದು. ಮಾನವೀಯತೆ, ಸಂಸ್ಕಾರಗಳು ದೀರ್ಘಾವಧಿಯಲ್ಲಿ ಫಲ ನೀಡುತ್ತವೆ.
>
> – ರವಿ ಗುಮಾಸ್ತೆ
> ಕಿಲೋಸ್ಕರ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ

# ವಚನಗಳ ಸಾರ ಭಾಷಣಕ್ಕೆ ಸೀಮಿತ ಆಡಳಿತದಲ್ಲಿ ಕಾಣದು

## ಗಂಗಾವತಿಯ ಟಿಎಂಎಇ ಸಂಸ್ಥೆ ಪ್ರಾಚಾರ್ಯ ಡಾ.ಕೆ.ಸಿ.ಕುಲಕರ್ಣಿ ಅಭಿಮತ | ದತ್ತಿ ಉಪನ್ಯಾಸ ಶರಣರ ಆದರ್ಶಗಳನ್ನು ಮೈಗೂಡಿಸಿಕೊಂಡು ನಡೆದರೆ, ಆದರ್ಶ ವ್ಯಕ್ತಿಗಳಾಗಲು ಸಾಧ್ಯ

**ಹಂಪಿ ಟೈಮ್ಸ್ ಕೊಟ್ಟೂರು**

12ನೇ ಶತಮಾನದಲ್ಲಿ ಬಸವಾದಿ ಶರಣರು ರಚಿಸಿದ ವಚನಗಳು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ. ತಾವು ರಚಿಸಿದ ವಚನಗಳಂತೆ ಶರಣರು ನಡೆಯುತ್ತಿದ್ದರು ಎಂದು ಗಂಗಾವತಿಯ ಟಿಎಂಎಇ ಸಂಸ್ಥೆ ಪ್ರಾಚಾರ್ಯ ಡಾ.ಕೆ.ಸಿ.ಕುಲಕರ್ಣಿ ಹೇಳಿದರು.

ಪಟ್ಟಣದ ಸರಕಾರಿ ನಿವೃತ್ತ ನೌಕರರ ಭವನದಲ್ಲಿ ಶರಣ ಸಾಹಿತ್ಯ ಪರಿಷತ್ ಆಯೋಜಿಸಿದದ ಲಿಂ. ಶರಣಯ್ಯ ಹಿರೇಮಠ ದತ್ತಿ ಸ್ವೀಕಾರ ಕಾರ್ಯಕ್ರಮದಲ್ಲಿ ಅವರು ಗುರುವಾರ ವಿಶೇಷ ಉಪನ್ಯಾಸ ನೀಡಿದರು.

ಶರಣರ ವಚನಗಳನ್ನು ನಮ್ಮ ಹಿಂದಿನವರು ಜೀವನದಲ್ಲಿ ಅಳವಡಿಸಿಕೊಂಡು ನಡೆದಿದ್ದರು. ಈ ಕಾರಣಕ್ಕಾಗಿ ಅವರು ಸಮಾಜದಲ್ಲಿ ಗೌರವ ಗಳಿಸಿ ಮಾದರಿಯಾಗಿದ್ದರು. ಆದರೆ ಇಂದಿನ ದಿನಗಳಲ್ಲಿ ಎಲ್ಲರೂ ಶರಣರ ವಚನಗಳ ಸಾರ ಹೇಳುತ್ತಿದ್ದಾರೆಯೇ ಹೊರತು ಆಡಳಿತದಲ್ಲಾಗಲೀ, ಸಮಾಜದಲ್ಲಾಗಲೀ, ವೈಯಕ್ತಿಕವಾಗಿ ಯಾರೂ ಅಳವಡಿಸಿಕೊಳ್ಳುತ್ತಿಲ್ಲ.



ವಚನಗಳ ಸಾರ ಅತ್ಯಂತ ಮಹತ್ವದ್ದಾಗಿದೆ. ಅವುಗಳನ್ನು ಇಂದಿನ ಪೀಳಿಗೆಗೆ ತಿಳಿಸಿ ಅರ್ಥ ಮಾಡಿಸುವ ಅವಶ್ಯಕತೆಯೂ ಇದೆ. ಶರಣ ಸಾಹಿತ್ಯ ಪರಿಷತ್ ತನ್ನ ಕಾರ್ಯಕ್ರಮಗಳಲ್ಲಿ ಇಂತಹ ಮಹಾತ್ಕಾರ್ಯವನ್ನು ಮಾಡಲಿ ಎಂದು ಹೇಳಿದರು.

ಬಿಡಿಸಿಸಿ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಕೆ.ಎಂ.ಚಿದಾನಂದಯ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಚನಗಳನ್ನು ಓದಿ ಕೊಂಡಿದ್ದ ಲಿಂ. ಎಚ್.ಎಂ. ಶರಣಯ್ಯನವರು, ಶರಣರ ಆದರ್ಶಗಳನ್ನು ಮೈಗೂಡಿಸಿಕೊಂಡು ಅದರಂತೆ ನಡೆದಿದ್ದರು. ಅವರ ಆದರ್ಶಗಳಿಂದಾಗಿ ಸಮಾಜದಲ್ಲಿ ಅವರು ಮಹಾನ್ ಪುರುಷರಾಗಿದ್ದರು ಎಂದರು.

ಶ.ಸಾ.ಪ. ಜಿಲ್ಲಾ ಅಧ್ಯಕ್ಷ ಡಾ.ಕೆ. ರವೀಂದ್ರನಾಥ್ ಮಾತನಾಡಿ, ಲಿಂ. ಶರಣಯ್ಯ ಹಿರೇಮಠ ಅವರು ಆದರ್ಶ ಶಿಕ್ಷಕರಾಗಿ, ಪ್ರಾಶುಂಪಾಲರಾಗಿ ನಿವೃತ್ತಿಯಾದ ನಂತರವೂ ಸಾಮಾಜಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿ ಕೊಂಡು ತಮ್ಮ ಜೀವನವನ್ನು ಶರಣರ ಹಾದಿಯಲ್ಲಿ ಸಾರ್ಥಕ ಕಂಡುಕೊಂಡಿದ್ದರು ಎಂದರು.

ಶ.ಸಾ.ಪ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಎಂ.ರವಿಕುಮಾರ್ ಮಾತನಾಡಿ, ಶರಣ ಪರಿಷತ್ ಸ್ಥಾಪನೆಯಾದಾಗಿನಿಂದ ಇಲ್ಲಿವರೆಗೂ ದತ್ತಿ ಕಾರ್ಯಕ್ರಮಗಳ ಮೂಲಕ ಶರಣರ ವಚನ ಸಾಹಿತ್ಯವನ್ನು ಮನೆ ಮನೆಗಳಿಗೆ ತಲುಪಿಸುವ ಕಾರ್ಯ ಮಾಡುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಸಾಪ ತಾಲೂಕು ಅಧ್ಯಕ್ಷ ದೇವರಮನಿ ಕರಿಯಪ್ಪ, ತಾಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಎಂ.ಸುಜಾತ, ತಾಲೂಕು ಕಸಾಪ ಅಧ್ಯಕ್ಷ ದೇವರಮನಿ ಕೊಟ್ರೇಶ, ಶಿಕ್ಷಕಿ ಕೆ.ಎಸ್.ಸುಮಾ ಮಾತನಾಡಿದರು.

ಪರಿಷನ್ ಸದಸ್ಯ ಟಿ.ಕೆ.ಸಿದ್ದರಾಮೇಶ್ವರ ಪ್ರಾಸ್ತಾವಿಕ ಮಾತನಡಿದರು. ತಾಲೂಕು ಕದಳಿ ಮಹಿಳಾ ವೇದಿಕೆ ಕಾರ್ಯದರ್ಶಿ ಡಿ.ಮಂಗಳ, ಶಸಾಪ ಖಜಾಂಚಿ ಅಂಗಡಿ ಚಂದ್ರಣ್ಣ, ದತ್ತಿ ದಾನಿಗಳಾದ ಎಂ.ಸುಜಾತ, ಎಂ.ಅಜ್ಜಯ್ಯಸ್ವಾಮಿ, ಎಚ್.ಎಂ. ಅನುಷಾ, ಶಾಂತಕುಮಾರಸ್ವಾಮಿ, ತಿಪ್ಪೇಸ್ವಾಮಿ ಇದ್ದರು. ಎಚ್.ಎಂ.ಪರಿಷತ್ ಕಾರ್ಯದರ್ಶಿ ಹೊಂಬಾಳೆ ಮಂಜುನಾಥ, ಅನೂಪ್ ನಿರ್ವಹಿಸಿದರು.

# ಹೊಸಪೇಟೆಯಲ್ಲಿ ಗುಡುಗು ಸಹಿತ ಭಾರಿಮಳೆ

## ಕಮಲಾಪುರ ಕೆರೆಕೋಡಿಬಿದ್ದು, ರಸ್ತೆ,–ಗದ್ದೆಗೆನುಗ್ಗಿದ ನೀರು





ಹೊಸಪೇಟೆಯಲ್ಲಿ ಗುರುವಾರ ರಾತ್ರಿ ಸುರಿದ ಧಾರಾಕಾರ ಮಳೆ ಎಂ.ಪಿ.ಪ್ರಕಾಶ ನಗರದ ಡಾ.ವಿಷ್ಣುವರ್ಧನ ಮುಖ್ಯ ರಸ್ತೆ ಕೆರೆಯಂತಾಗಿದೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ. ಭತ್ತದ ಬೆಳೆ ನೆಲಕಚ್ಚಿದೆ.

# ಕನ್ನಡ ಜ್ಯೋತಿ ರಥಯಾತ್ರೆ ಆಗಮನ: ಜಿಲ್ಲಾಡಳಿತದಿಂದ ಪುಷ್ಪ ನಮನ ಸಲ್ಲಿಕೆ



■ **ಹಂಪಿ ಟೈಮ್ಸ್ ಕೊಪ್ಪಳ**

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳದ ಅಂಗವಾಗಿ ಕನ್ನಡ ಜ್ಯೋತಿ ಹೊತ್ತ ಕನ್ನಡ ಜ್ಯೋತಿ ರಥ ಯಾತ್ರೆಯು ಅಕ್ಟೋಬರ್ 19ರಂದು ಕೊಪ್ಪಳ ಜಿಲ್ಲೆಯಾದ್ಯಾಂತ ಸಂಚರಿಸಲು ಕೊಪ್ಪಳಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ಶುಕ್ರವಾರದಂದು ಜಿಲ್ಲಾಡಳಿತದಿಂದ ಕನ್ನಡ ರಥವನ್ನು ಬರಮಾಡಿಕೊಂಡು ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಲ್ಲಿಸಲಾಯಿತು.

ಜಿಲ್ಲಾಡಳಿತ ಭವನದ ಆವರಣದಲ್ಲಿ ಹಮ್ಮಿಕೊಳ್ಳಲಾದ ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ನಲೀನ ಅತುಲ್ ಅವರು ನಾಡ ದೇವತೆ ತಾಯಿ ಭುವನೇಶ್ವರಿ ಪುತಳಿಗೆ ಮಾಲಾರ್ಪಣೆ ಹಾಗೂ ಪುಷ್ಪಾರ್ಪನೆ ಮಾಡಿದರು. ಬಳಿಕ ಕನ್ನಡ ಬಾವುಟ ಹಿಡಿದು ರಥ ಯಾತ್ರೆಗೆ ಚಾಲನೆ ನೀಡಿದರು.

ಇದೆ ವೇಳೆ ತಾಯಿ ಭುವನೇಶ್ವರಿಗೆ ಜೈ, ನಾಡ ದೇವತೆಗೆ ಜೈ, ಕರುನಾಡಿಗೆ ಜೈ, ಕನ್ನಡ ಸಾಹಿತ್ಯ ಪರಿಷತ್ತಿಗೆ ಜೈ ಸೇರಿದಂತೆ ಕನ್ನಡ ಹಾಗೂ ಕನ್ನಡ ನಾಡಿನ ಪರ ಘೋಷಣೆಗಳು ಮೊಳಗಿದವು. ಡೊಳ್ಳು ಕುಣಿತವು ಕನ್ನಡ ಜ್ಯೋತಿ ರಥ ಯಾತ್ರೆಗೆ ಮೆರಗು ಹೆಚ್ಚಿಸಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ, ಕೊಪ್ಪಳ ತಹಶಿಲ್ದಾರರಾದ ವಿಠ್ಠಲ ಚೌಗಲಾ, ತಾ.ಪಂ ದುಂಡಪ್ಪ ದುರಾದಿ, ಸಾಹಿತಿಗಳಾದ ಡಾ ಮಹಾಂತೇಶ್ ಮಲ್ಲನಗೌಡರ್ ಸೇರಿದಂತೆ ಕಸಾಪ ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಸಮುದ್ರದ ನೀರಿನಿಂದ ಉಪ್ಪನ್ನು ತೆಗೆದರೆ...




ನಿಮ್ಮ ದಾಹವನ್ನು ತಣಿಸಿಕೊಳ್ಳಲು ನೀವು ಎಲ್ಲಿಗೆ ಹೋಗುತ್ತೀರಿ? ಅಡುಗೆ ಮನೆ, ಸ್ಥಳೀಯ ವಾಟರ್ ಟ್ಯಾಂಕ್, ಕೊಳಾಯಿ, ಕೆರೆ, ನದಿ, ಬಾವಿ ಇನ್ನಿತರೇ ಕುಡಿಯುವ ನೀರಿನ ಮೂಲಗಳ ಬಳಿ ಹೋಗುತ್ತೆವೆ ಅಲ್ಲವೇ?. 21 ನೇ ಶತಮಾನದಲ್ಲಿ ಕುಡಿಯುವ ನೀರಿಗೆ ದೂರ ಹೋಗಬೇಕಾದ ಅಗತ್ಯ ಇಲ್ಲ. ಏಕೆಂದರೆ ಬಹುತೇಕವಾಗಿ ನೀರು ಇನ್ನೂ ಮನೆ ಬಾಗಿಲಿಗೆ ಪೂರೈಕೆಯಾಗುತ್ತಿದೆ. ಆದರೆ ಬಹುತೇಕ ಹಳ್ಳಿಗಳು ಮಳೆಗಾಲ ಮಕ್ತಾಯವಾಗುತ್ತಿದ್ದಂತೆಯೇ ನೀರಿನ ಬವಣೆ ಅನುಭವಿಸುತ್ತಿವೆ. ಮುಂದೊಂದು ದಿನ ಆ ಸಮಸ್ಯೆ ನಮಗೂ ಬರುತ್ತದೆ ಎಂಬ ಆತಂಕ ನಮಗಿದ್ದರೂ ನಾವಿನ್ನೂ ನೀರನ್ನು ಸಂರಕ್ಷಿಸಲು ಸಾಧ್ಯವಾಗುತ್ತಿಲ್ಲ.

ಬಹುತೇಕವಾಗಿ ನೀರು ಮನೆಬಾಗಿಲಿಗೆ ಪೂರೈಕೆ ಆಗುತ್ತಿರುವುದರಿಂದ ನಾವಿನ್ನು ಆ ಬಗ್ಗೆ ಚಿಂತಿಸುತ್ತಿಲ್ಲ. ಕುಡಿಯಲು ಸಾಕಾಗುವಷ್ಟು, ಸ್ನಾನಕ್ಕೆ ಬೇಕಾದಷ್ಟು, ಶೌಚ ಮತ್ತು ಇನ್ನಿತರೇ ಕೆಲಸಗಳಿಗೆ ಅಗತ್ಯಕ್ಕಿಂತ ಹೆಚ್ಚು ನೀರು ಸರಬರಾಜು ಆಗುತ್ತಲೇ ಇದೆಯಲ್ಲ. ಚಿಂತೆ ಯಾಕೆ? ಎನ್ನುವವರು ನಾವು. ಒಂದು ವೇಳೆ ಮನೆಬಾಗಿಲಿಗೆ ನೀರು ಸರಬರಾಜಾಗದಿದ್ದರೆ? ಕುಡಿಯಲು ಹಾಗೂ ಸ್ನಾನಕ್ಕೆ ಎಲ್ಲಿಗೆ ಹೋಗಬೇಕಾಗುತ್ತಿತ್ತು? ಕೆರೆ, ಬಾವಿ, ನದಿ, ಕಡಲ ತೀರಕ್ಕೆ ಪ್ರವಾಸ ಹೋಗಬೇಕಾಗುತ್ತಿತ್ತು ಅಲ್ಲವೇ? ಇದಕ್ಕಾಗಿ ಸಾಕಷ್ಟು ಹಣ ವೆಚ್ಚವಾಗುತ್ತಿತ್ತು.

ಈಗಿರುವ ನೀರಿನ ಮೂಲಗಳು ಬತ್ತಿ ಹೋದರೆ ಏನು ಮಾಡುವುದು? ಎಂಬ ಪ್ರಶ್ನೆ ಬಹುದಿನಗಳಿಂದ ಕಾಡುತ್ತಲೇ ಇದೆ. ಭೂಮಿಯ ಮೇಲೆ ಶೇಕಡಾ 70ರಷ್ಟು ನೀರು ಇದೆ ಇದೆ. ಅದರಲ್ಲಿ ಬಹುಪಾಲು ನೀರು ಸಮುದ್ರದ ಉಪ್ಪು ನೀರು.

ಕುಡಿಯಲು, ಸ್ನಾನ ಮಾಡಲು, ಬಳಸಲು ಯೋಗ್ಯವಲ್ಲದ ನೀರು.

**ಸಮುದ್ರಕ್ಕೆ ಉಪ್ಪು ಬಂದದ್ದು,,,, :** ಸಮುದ್ರದಲ್ಲಿ ಯಾಕಿಷ್ಟು ಉಪ್ಪು ಸೇರಿದೆ? ಎಂಬುದು ಬಹುತೇಕರಿಗೆ ತಿಳಿದೇ ಇದೆ. ಸುಮಾರು 3.8 ಶತಕೋಟಿ ವರ್ಷಗಳ ಹಿಂದೆ ಭೂಮಿಯ ಮೇಲ್ಮೈ ಮೇಲಿನ ಆವಿ ತಣ್ಣಗಾಗಿ ದ್ರವ ರೂಪಕ್ಕೆ ತಿರುಗಿತು. ಆಗ ನೀರಿಗೆ ಉಪ್ಪು ಸೇರಿರಲಿಲ್ಲ. ಆಗ ನಿಜಕ್ಕೂ ಸಾಗರಗಳ ನೀರು ತಾಜಾ ಆಗಿತ್ತು. ಆದರೆ ಇದು ಹಾಗೆಯೇ ಉಳಿಯಲಿಲ್ಲ. ಪ್ರತಿಬಾರಿ ಮಳೆಯಾದಾಗಲೆಲ್ಲ ನೀರು ಹರಿದು ನದಿ ತೊರೆಗಳನ್ನು ದಾಟಿ ಸಾಗುತ್ತಿತ್ತು. ಹೀಗೆ ಸಾಗುವಾಗ ಮಣ್ಣಿನಲ್ಲಿ ಕರಗಿದ ಒಂದಿಷ್ಟು ಲವಣಗಳು ನೀರಿಗೆ ಸೇರುತ್ತಲೇ ಸಾಗಿದವು. ಹೀಗೆ ಲವಣಯುಕ್ತ ನೀರು ಸಾಗರಗಳನ್ನು ಸೇರುತ್ತಲೇ ಹೋಯಿತು. ಬಿಸಿಲಿನ ತಾಪಕ್ಕೆ ನೀರು ಮಾತ್ರ ಆವಿಯಾಯಿತು. ಅದರಲ್ಲಿನ ಲವಣಗಳು ಅಲ್ಲಿಯೇ ಉಳಿದವು. ಸಾವಿರಾರು ವರ್ಷಗಳ ನಿರಂತರ ಪ್ರಕ್ರಿಯೆಯಿಂದ ಸಾಗರಗಳ ನೀರು ಕ್ರಮೇಣವಾಗಿ ಉಪ್ಪು ನೀರಾಗಿ ಪರಿವರ್ತನೆ ಹೊಂದಿತು. ಅಂದರೆ ಸಾಗರಗಳಲ್ಲಿ ಸಂಚಯವಾದ ಉಪ್ಪು 3.8 ಶತಕೋಟಿ ವರ್ಷಗಳ ಇತ್ತೀಚಿನದ್ದು.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Hampi Times E-paper
SCAN AND READ

**ಸಮುದ್ರದಿಂದ ಉಪ್ಪನ್ನು ತೆಗೆದರೆ? :** ವಾಸ್ತವವಾಗಿ ಸಮುದ್ರದಲ್ಲಿ ತುಂಬಾ ಉಪ್ಪು ಇದೆ. ಅದನ್ನೆಲ್ಲಾ ತೆಗೆದು ಹಾಕಿದರೆ ಹೇಗೆ? ಹೌದು ಒಳ್ಳೆಯ ಆಲೋಚನೆ. ಸಮುದ್ರದ ಉಪ್ಪನ್ನೆಲ್ಲಾ ತೆಗೆದರೆ ಅದನ್ನು ಹಾಕೋದು ಎಲ್ಲಿ? ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಒಂದು ವೇಳೆ ಉಪ್ಪನ್ನು ತೆಗೆದು ಅದನ್ನು ಭೂಮಿಯ ಮೇಲೆ ಸಮನಾಗಿ ಹರಡಿದರೆ ಅದು 40 ಅಂತಸ್ತಿನ ಕಟ್ಟಡದ ಎತ್ತರಕ್ಕೆ ಸಮನಾಗುತ್ತದೆ ಎಂದು ಊಹಿಸಲಾಗಿದೆ. ಹಾಗಾಗಿ ಸಮುದ್ರದಿಂದ ಉಪ್ಪನ್ನು ತೆಗೆದರೆ ಪ್ರಪಂಚವು ಯಾವ ರೀತಿ ಕಾಣಬಹುದು? ಊಹಿಸಿಕೊಳ್ಳಿ.

ಸಮುದ್ರದಿಂದ ಉಪ್ಪನ್ನು ತೆಗೆದರೆ ಸಾಗರಗಳು ಖಂಡಿತವಾಗಿಯೂ ದೇವತೆಗಳಂತೆ ಧ್ವನಿಸುತ್ತವೆ. ವಿಶ್ವದ ಮೂರನೇ ಒಂದು ಭಾಗ 2025ರ ವೇಳೆಗೆ ಧೀರ್ಘಕಾಲದ ನೀರಿನ ಸಮಸ್ಯೆ ಎದುರಿಸಲಿವೆ ಎಂದು ಹೇಳಲಾಗುತ್ತದೆ. ಈಗಿನ ನಮ್ಮ ನೀರನ ಬಳಕೆಯ ದರದ ಲೆಕ್ಕಾಚಾರದ ಪ್ರಕಾರ ಜಾಗತಿಕ ನೀರಿನ ಬೇಡಿಕೆ ಪ್ರತಿ 20 ವರ್ಷಗಳಿಗೆ ಎರಡು ಪಟ್ಟು ಹೆಚ್ಚಾಗುತ್ತಿದೆ. ಒಂದು ವೇಳೆ ಸಾಗರಗಳ ನೀರು ತಾಜಾ ನೀರು ಅಗಿದ್ದರೆ ಸಾಗರಗಳ ನೀರೂ ಸಹ ಕಡಿಮೆಯಾಗುತ್ತಿತ್ತು.

**ಜಲಚರಗಳ ಸಾವು :** ಸಮುದ್ರದಲ್ಲಿ ಸರಿಸುಮಾರು 228450 ಪ್ರಭೇಧಗಳ ಇಪ್ಪತ್ತು ಲಕ್ಷಕ್ಕೂ ಅಧಿಕ ಜೀವರಾಶಿಗಳಿವೆ. ಈ ಎಲ್ಲಾ ಜೀವಿಗಳು ಸಮುದ್ರದ ಉಪ್ಪು ನೀರಿನ ವಾತಾವರಣಕ್ಕೆ ಅನುಗುಣವಾಗಿ ತಮ್ಮ ದೇಹ ರಚನೆಯನ್ನು ಮಾರ್ಪಾಟು ಮಾಡಿಕೊಂಡಿವೆ. ಒಂದು ವೇಳೆ ಸಾಗರದ ನೀರು ನಿರ್ಜಲೀಕರಣಗೊಂಡರೆ ಎಂದಿಗೂ ಈ ಜೀವಿಗಳನ್ನು ಕಾಣಲು ಸಾಧ್ಯವೇ ಇಲ್ಲ. ಸಾಗರಗಳಲ್ಲಿ ಉಪ್ಪು ಇಲ್ಲವಾದರೆ ಕಡಲ ಜೀವಿಗಳು ಸಹ ಇನ್ನಿಲ್ಲವಾಗುತ್ತಿದ್ದವು.

**ದ್ಯುತಿ ಸಂಶ್ಲೇಷಣೆ ಸ್ಥಗಿತ :** ನಮ್ಮ ವಾತಾವರಣದ ಉಷ್ಣಾಂಶ ಹೆಚ್ಚಾಗಿ ಭೂವಾಸಿ ಜೀವಗಳ ಮೇಲೆ ಆಗಾಧ ಪರಿಣಾಮ ಉಂಟಾಗುತ್ತಿತ್ತು. ಭೂಮಿಯ ಮೇಲೆ ದ್ಯುತಿ ಸಂಶ್ಲೇಷಣೆಯಂತಹ ಮಹತ್ವ ಕ್ರಿಯೆ ನಡೆಯುತ್ತಲೇ ಇರಲಿಲ್ಲ. ಆಗ ಭೂಮಿಯ ಮೇಲೆ ಆಮ್ಲಜನಕದ ಕೊರತೆಯಾಗುತ್ತಿತ್ತು. ಜೀವಿಗಳ ವೈವಿಧ್ಯತೆ ನಶಿಸಿ, ಆಹಾರ ಸರಪಳಿ ಕುಸಿಯುತ್ತಿತ್ತು ಮತ್ತು ಅದೇ ವೇಳೆ ಇಂಗಾಲದ ಡೈ ಆಕ್ಸೈಡ್ ಹೆಚ್ಚಳವಾಗಿ ಹಸಿರು ಮನೆ ಪರಿಣಾಮ ಉಂಟಾಗುತ್ತಿತ್ತು. ಇದರಿಂದ ಜನ ಜೀವನ ತುಂಬಾ ಕಷ್ಟಸಾಧ್ಯವಾಗುತ್ತಿತ್ತು.

**ನೈಸರ್ಗಿಕ ವಿಕೋಪಗಳ ಹೆಚ್ಚಳ :** ಸಮುದ್ರದ ನೀರಿನಲ್ಲಿ ಉಪ್ಪು ಇಲ್ಲದೇ ಹೋದರೆ ಭೂಮಿಯ ಮೇಲಿನ ಇಡೀ ಪ್ರಕ್ರಿಯೆಯು ಅಸ್ತವ್ಯಸ್ತಗೊಳ್ಳುತ್ತದೆ. ಭೂಮಿಯ ಮೇಲ್ಮೈಗಳು ತಂಪಾಗಿ, ಹವಾಮಾನದಲ್ಲಿ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಚಂಡಮಾರುತಗಳು ಹೆಚ್ಚು ಚಲನಶೀಲವಾಗುತ್ತವೆ ಮತ್ತು ಅವು ಪ್ರಾಣಾಂತಿಕವಾಗಬಹುದು. ಭೂಮಿಯು ನೈಸರ್ಗಿಕ ವಿಕೋಪಗಳ ತೀವ್ರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಇಷ್ಟೆಲ್ಲಾ ಅಗುವ ವೇಳೆಗೆ ಭೂಮಿಯ ಮೇಲೆ ಏನಾಗುತ್ತದೆಂದು ನೋಡಲು ನಾವ್ಯಾರು ಇರುವುದಿಲ್ಲ. ಅಲ್ಲವೇ?

**ಅಲ್ಪ ಪ್ರಯತ್ನ :** ಸಮುದ್ರದ ನೀರಿನಿಂದ ಉಪ್ಪನ್ನು ತೆಗೆದು ತಾಜಾ ನೀರನ್ನು ಪಡೆಯುವಲ್ಲಿ ಅರಬ್ ರಾಷ್ಟ್ರಗಳು ಒಂದಿಷ್ಟು ಪ್ರಯತ್ನ ಮಾಡಿವೆ. ಈ ಪ್ರಕ್ರಿಯೆ ತುಂಬಾ ಶ್ರಮದಾಯಕ ಹಾಗೂ ವೆಚ್ಚದಾಯಕ. ಇದು ಕೇವಲ ಅಲ್ಪ ಪ್ರಮಾಣದ ಪ್ರಯತ್ನ. ಇದು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಶುದ್ದ ನೀರು ಪಡೆಯಲು ಅನೇಕ ತಾಂತ್ರಿಕ ಮತ್ತು ನೈಸರ್ಗಿಕ ಸಮಸ್ಯೆಗಳು ಎದುರಾಗುತ್ತವೆ. ಇವೆಲ್ಲವನ್ನೂ ಮೀರಿದ ತಂತ್ರಜ್ಞಾನ ಮತ್ತು ಪ್ರಯತ್ನಗಳ ಅಗತ್ಯವಿದೆ.

# ದಾಂಪತ್ಯದಲ್ಲಿ ವಿಷಮತೆ

ನಮ್ಮ ಭಾರತೀಯ ಸಭ್ಯತೆಯಲ್ಲಿ ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯ ಎಂಬ ಮಾತಿದೆ. ಏಳೇಳು ಜನ್ಮಗಳ ಸಂಬಂಧ.. ಅನುಬಂಧ ಎಂದು ವೈವಾಹಿಕ ಬಂಧನವನ್ನು ದೈವಿಕವಾಗಿ ಕಾಣುವ ಭವ್ಯ ಪರಂಪರೆಯ ಭಾರತ ಮಾತೆಯ ಮಕ್ಕಳು ನಾವು.

ಆದರೆ ದೀಪದ ಕೆಳಗೆ ಕತ್ತಲು ಎಂಬ ಮಾತು ಕೇಳಿದ್ದೇವಷ್ಟೇ. ಕೆಲವು ಸಂಬಂಧಗಳು ಈ ಎಲ್ಲಾ ಸಾಂಪ್ರದಾಯಿಕ ಮಿತಿಯನ್ನು ಮೀರಿ ವಿಷಮಿಸುತ್ತವೆ. ಅವರಿಬ್ಬರ ಏಳೇಳು ಜನ್ಮದ ನಂಟು ಕಗ್ಗಂಟಾದಾಗ ಕವಲು ದಾರಿಯಲ್ಲಿ ನಡೆಯುವುದು ಅನಿವಾರ್ಯವಾಗುತ್ತದೆ. ವೈವಾಹಿಕ ಸಂಬಂಧವನ್ನು ಶಿಥಿಲಗೊಳಿಸುವ ಅಂತಹ ಸಂಗತಿಗಳು ಏನಿರಬಹುದು ಎಂದರೆ

* ಸಂಗಾತಿಗಳಲ್ಲಿ ಯಾರೇ ಆಗಲಿ ಒಬ್ಬರು ಮತ್ತೊಬ್ಬರ ಮೇಲೆ ದೈಹಿಕವಾಗಿ ಹಲ್ಲೆ ಮಾಡುವುದು ಮತ್ತು ಭಾವನಾತ್ಮಕವಾಗಿ ಕೀಳರಿಮೆಯಿಂದ ಬಳಲುವಂತೆ ಮಾಡುವುದು. ದಾಂಪತ್ಯ ದ್ರೋಹವೆಸಗುವುದು ತಪ್ಪು



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

* ತಮ್ಮಿಬ್ಬರ ನಡುವಿನ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳದಿರುವುದು, ಅತಿಯಾದ ನಿರ್ಲಕ್ಷ ಮತ್ತು ತುಚ್ಛ ಮನೋಭಾವವನ್ನು ಸಂಗಾತಿ ಗಳಲ್ಲಿ ಒಬ್ಬರು ತೋರಿದರೂ ಬದುಕು ಗಾಳಿಗಿಟ್ಟ ಸೊಡರಿನಂತೆ ಆಗುವುದರಲ್ಲಿ ಸಂಶಯವಿಲ್ಲ.
* ಮಾದಕ ದ್ರವ್ಯಗಳ ವ್ಯಸನಿಯಾ ಗಿರುವುದು.
* ಸಂಗಾತಿಯೊಂದಿಗೆ ಅಪ್ರಾಮಾಣಿಕ ನಡವಳಿಕೆ, ಭಾವನಾತ್ಮಕ ದೂರವನ್ನು ಹೊಂದಿರುವುದು
* ಸಂವಹನದ ಕೊರತೆ, ಬಿದ್ದಿರಲಿ ಎಂಬಂತಹ ಅಗೌರವ ಭಾವ, ಅಹಂಕಾರ ಗಳು ದಂಪತಿಗಳಲ್ಲಿ ಅಸಹನೆಯನ್ನು ಹುಟ್ಟು ಹಾಕುತ್ತವೆ.
* ಪ್ರೀತಿ ಮತ್ತು ಪ್ರೇಮರಾಹಿತ್ಯವು ಬದುಕನ್ನು ನಿಸ್ಸಾರಗೊಳಿಸುತ್ತದೆ.

ದೀರ್ಘಕಾಲದವರೆಗೆ ಇದೇ ರೀತಿ ಬದುಕು ನಡೆದರೆ ಸಂಬಂಧಗಳು ಬಿಡಿಸಿಕೊಳ್ಳಲಾಗದಷ್ಟು ಗೋಜಲಾಗುತ್ತವೆ ಇಲ್ಲವೇ ಮತ್ತೆಂದು ಜೋಡಿಸಲಾಗದಂತೆ ಬಿರುಕು ಬಿಡುತ್ತವೆ.

ಪತಿ ಪತ್ನಿಯರ ಸಂಬಂಧದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಮತ್ತು ಭಾವನಾತ್ಮಕ ಜೊತೆಗಾರಿಕೆ ಬೇಕೇ ಬೇಕು. ಪರಸ್ಪರರಲ್ಲಿ ಗೌರವ,ಆಕರ್ಷಣೆ ಮತ್ತು ದೈಹಿಕ ಸಂತೃಪ್ತಿಯು ಅಷ್ಟೇ ಅವಶ್ಯಕ. ಈ ಪ್ರೀತಿಯಾದರೂ ಅಷ್ಟೇ ಹೂವಿಗೆ ನೀರೆರೆದು ಪೋಷಿಸುವಂತಿರಬೇಕೇ ಹೊರತು ಉಸಿರುಗಟ್ಟಿಸು ವಂತಿರಬಾರದು. ದಂಪತಿಗಳಲ್ಲಿ ಇಬ್ಬರೂ ತಮ್ಮ ತಮ್ಮ ದೈನಂದಿನ ಬದುಕನ್ನು ಸ್ವತಂತ್ರವಾಗಿ ನಿರ್ಭಿಡೆಯಿಂದ ನಡೆಸಿಕೊಂಡು ಹೋಗುವಷ್ಟು ಅವಕಾಶವನ್ನು ಪರಸ್ಪರರಿಗೆ ಒದಗಿಸಿಕೊಡಬೇಕು. ಏನು ಹೇಳಿದರೆ ಏನಾಗಿಬಿಡುತ್ತದೆಯೋ ಎಂಬಂತಹ ಭಯದ ಭಾವದಲ್ಲಿ ಸಂಗಾತಿ ನರಳಿದರೆ ಪ್ರೀತಿ ಉಸಿರುಗಟ್ಟಿ ಸಾಯುತ್ತದೆ. ಪುರುಷ ಮುಖ್ಯವಾಗಿ ತನ್ನ ಭೌತಿಕ ಅವಶ್ಯಕತೆಗಳಿಗೆ ಸಂಗಾತಿಯನ್ನು ಬಯಸಿದರೆ ಸ್ತ್ರೀ ತನ್ನ ಭಾವನಾತ್ಮಕ ಅವಶ್ಯಕತೆಗಳಿಗೆ ಪತಿಯನ್ನು ಅವಲಂಬಿಸಿರುತ್ತಾಳೆ. ತಮ್ಮ ಸಂಗಾತಿಯಲ್ಲಿರುವ ಎಲ್ಲಾ ಗುಣಾವಗುಣಗಳ ಜೊತೆಗೆ ಅವರನ್ನು ಒಪ್ಪಿಕೊಂಡು ಬದುಕು ಸಾಗಿಸಬೇಕು.ತಪ್ಪಿದ್ದಲ್ಲಿ ನಯವಾಗಿ ತಿದ್ದಲು ಪ್ರಯತ್ನಿಸಬೇಕು. ದಾಂಪತ್ಯದಲ್ಲಿ ಪರಸ್ಪರ ಅಸಂತೃಪ್ತಿ ಮನೆ ಮಾಡಿದ್ದರೆ ಸಂತೋಷಕ್ಕೆ ಠಾವೆಲ್ಲಿ?

ದಾಂಪತ್ಯ ಬಿಗಡಾಯಿಸುವಲ್ಲಿ ಕೆಲವು ವೈಯುಕ್ತಿಕ ತೊಂದರೆಗಳು ಹೀಗಿವೆ.

* ಉಸಿರು ಕಟ್ಟಿಸುವ ಮತ್ತು ಭಾವನಾತ್ಮಕತೆ ಇಲ್ಲದ ಸಂಬಂಧ,
* ವೈಯುಕ್ತಿಕ ಗುರುತಿಸುವಿಕೆ ಇಲ್ಲದೆ ಇರುವುದು,
* ಸದಾ ಅಸಂತೋಷ, ಅತೃಪ್ತಿ ಮನೆ ಮಾಡಿರುವುದು
* ಪರಿಹಾರವಿಲ್ಲದ ಸಮಸ್ಯೆಗಳು
* ಅತಂತ್ರ ಮತ್ತು ಅಸಹಕಾರ ಮನೋಭಾವಗಳು ದಾಂಪತ್ಯದಲ್ಲಿ ಇದ್ದರೆ ಅಂತಹ ದಾಂಪತ್ಯ ಬಹಳ ಕಾಲ ಉಳಿಯದು.

ಯಾವುದೇ ಕಾರಣಗಳು ಇಲ್ಲದೆ ಇದ್ದಾಗ್ಯೂ ಕೂಡ ಕೆಲ ಸಂಗತಿಗಳು ಪತಿ–ಪತ್ನಿಯರ ನಡುವಿನ ಸಂಬಂಧಕ್ಕೆ ವಿಷಮತೆಯನ್ನು ತಂದಿಡುತ್ತವೆ ಎಂದೂ ಸರಿ ಹೋಗದ ಪರಸ್ಪರರ ಕುರಿತ ಅಭಿಪ್ರಾಯಗಳು,ಮೌಲ್ಯಗಳು ಮತ್ತು ಗುರಿಗಳು ಇಲ್ಲದ ಜೀವನ, ಪರಸ್ಪರ ನಂಬಿಕೆ ಮತ್ತು ಗೌರವ ಇಲ್ಲದೆ ಇರುವುದು, ವಿಪರೀತ ವಾದ ಜಗಳಗಳಲ್ಲಿ ಪರಿವರ್ತನೆಯಾಗುವುದು, ಅವರಿಬ್ಬರ ಮಧ್ಯದಲ್ಲಿ ಸ್ನೇಹ, ಸಾಂಗತ್ಯರಾಹಿತ್ಯತೆ ಕಂಡು ಬರುವ ತೊಂದರೆಗಳು ತಲೆದೋರಿದರೆ ಜೊತೆಯಾಗಿ ಬಾಳುವುದು ಕಷ್ಟವಾಗುತ್ತದೆ.

ಬಿಟ್ಟು ಬಿಡುವುದೇ ಒಳಿತು ಎಂಬ ಭಾವ ಬರುವುದು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಗಂಡಾಂತರದಲ್ಲಿ ಇದೆ ಎಂದು ಅನಿಸಿದಾಗ, ಯಾವುದೇ ರೀತಿಯ ಉತ್ತಮ ಬೆಳವಣಿಗೆ ಇಲ್ಲದ ಸಮಾಲೋಚನೆಗಳಿಂದ ದಣಿದಾಗ,

ಇಬ್ಬರ ಸಂಬಂಧ ಇನ್ಯಾವತ್ತೂ ಸರಿ ಹೋಗದು ಎಂದು ಸಂಗಾತಿಗಳಲ್ಲಿ ಇಬ್ಬರೂ ಭಾವಿಸಿದಾಗ, ಭಾವನೆಗಳಿಲ್ಲದ ಬರಡು ಬದುಕನ್ನು ಬದುಕುವುದು ಬೇಡವೆನಿಸಿದಾಗ, ಇದಕ್ಕಿಂತಲೂ ಉತ್ತಮ ಸಂಗಾತಿ ನನಗೆ ದೊರೆಯಬಹುದು ಎಂಬ ಭಾವ ಬಂದಾಗ ಖಂಡಿತವಾಗಿಯೂ ಸಂಬಂಧ ಹಳಸಿದ್ದು ದೂರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಅರಿಯಬಹುದು.

ಪರಸ್ಪರ ಒಪ್ಪಿಗೆಯ ಮೇರೆಗೆ ಕಾನೂನಾತ್ಮಕವಾಗಿ ದಂಪತಿಗಳು ಬೇರೆಯಾದ ನಂತರ ಕೂಡಲೇ ಮತ್ತೊಂದು ಸಂಬಂಧಕ್ಕೆ ಎಳಸಬಾರದು. ಹಳೆಯ ಬದುಕನ್ನು ಮರೆಯುವ ಸಲುವಾಗಿ ಅನಾರೋಗ್ಯಕರ ಹವ್ಯಾಸಗಳಿಗೆ ತಮ್ಮನ್ನು ತಾವು ಈಡು ಮಾಡಿಕೊಳ್ಳದೆ ವೈಯುಕ್ತಿಕ ಕಾಳಜಿ ಮತ್ತು ಮನದ ಗಾಯ ಮಾಯುವವರೆಗೆ ತಡೆಯಬೇಕು ಆಪ್ತರ ಮತ್ತು ಸಂಬಂಧಿಕರ ಭಾವನಾತ್ಮಕ ಬೆಂಬಲವನ್ನು ಪಡೆಯಬೇಕು ವೈಯುಕ್ತಿಕ ಪ್ರಗತಿ ಮತ್ತು ಬೆಳವಣಿಗೆಯತ್ತ ಗಮನ ಹರಿಸಬೇಕು. ವೈಯುಕ್ತಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಹಿಂದಿನ ತಪ್ಪುಗಳು ಮತ್ತೆ ಮರುಕಳಿಸಿದಂತೆ ಬದುಕಿನಲ್ಲಿ ಜಾಗ್ರತೆ ವಹಿಸಬೇಕು

ಅಂತಿಮವಾಗಿ ದಾಂಪತ್ಯ ಎಂಬ ಚಕ್ಕಡಿಯ ಎರಡು ಗಾಲಿಗಳು ಜೊತೆಯಾಗಿ ಸಾಗಬೇಕೆ ಹೊರತು ಎತ್ತು ಏರಿಗೆಳೆದರೆ ಕೋಣ ಕೆರೆಗಿಳಿಯಿತು ಎಂಬಂತೆ ಆಗಬಾರದು. ಅದಾಗದಿದ್ದರೆ ಪರಸ್ಪರರ ಭಾವನೆಗಳಿಗೆ ಬೆಲೆ ಕೊಟ್ಟು ಮಾತುಕತೆಯ ಮೂಲಕ ಕಾನೂನಾತ್ಮಕವಾಗಿ ದೂರವಾಗುವುದು ಲೇಸು.... ಸಾಧ್ಯವಾದಷ್ಟು ಮೊದಲನೆಯ ಹಾದಿ ಅತ್ಯುತ್ತಮವಾದುದು. ದಂಪತಿಗಳು ಒಬ್ಬರಿಗೊಬ್ಬರು ಸೋತು ಜೀವನದಲ್ಲಿ ಗೆಲ್ಲಬೇಕು, ವಿವಾಹ ಎಂಬ ಸುಮಧುರ ಬಂಧನ ಚಿರಕಾಲ ಸಾಗಲಿ ಎಂಬ ಆಶಯದೊಂದಿಗೆ

## ಕವಿ ಮನಸು

### ಕೆಂಪಿನ ದಿನಕರ



ಗಾಳಿಯ ಬೀಸಿಗೆ ತೆಂಗಿನ ಗರಿಗಳು
ನರ್ತನ ಗೈದಿವೆ ಓಲಾಡಿ
ರವಿಯನು ಕಳಿಸುತ ಚಂದ್ರಮ ಮೂಡುವ
ಮಿನುಗುವ ಚುಕ್ಕಿಯ ಜೊತೆಗೂಡಿ

ತೆಂಗಿನ ಗರಿಯಲಿ ಚಂದದಿ ಕುಳಿತಿದೆ
ಬೆಳ್ಳನೆ ಬಣ್ಣದ ಬೆಳ್ಳಕ್ಕಿ
ತಲೆಯನು ಎತ್ತಿದೆ ಗತ್ತನು ಮೆರೆದಿದೆ
ಜಂಭದಿ ಕುಳಿತಿದೆ ಅದು ಸೊಕ್ಕಿ

ಹೊಳೆಯುವ ಸೂರ್ಯಗೆ ಕೆಂಪಿನ ಬಣ್ಣವ
ಬಳಿದಿಹರಾರೋ ಸೊಗಸಾಗಿ
ಸಿಂಗರಗೊಳ್ಳುವ ಆತುರ ಹೆಚ್ಚಿತೆ
ಮುಳುಗುವ ಸಮಯದೆ ಯಾಕಾಗಿ

ಕತ್ತಲು ಕವಿಯುವ ಹೊತ್ತಿದು ಬಂದಿದೆ
ಸುಮ್ಮನೆ ನಿಂತಿವೆ ಮರಗಿಡವು
ಸೂರ್ಯನ ಅಗಲಿಕೆ ಅನುದಿನ ನಡೆವುದು
ಅರಿಯದೆ ಏತಕೆ ಈ ನೋವು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಮೈಕ್ರೋ ನ್ಯೂಸ್

### ಶಸ್ತ್ರಾಸ್ತ್ರ ಪೋಲೀಸರಿಗೆ ಒಪ್ಪಿಸಲು ಜಿಲ್ಲಾ ಚುನಾವಣಾ ಅಧಿಕಾರಿ ಮಿಶ್ರಾ ಆದೇಶ

**ಹಂಪಿ ಟೈಮ್ಸ್ ಬಳ್ಳಾರಿ**
ಸಂಡೂರು ವಿಧಾನಸಭೆ ಉಪಚುನಾವಣೆ-2024ರ ಅಂಗವಾಗಿ ಸಂಡೂರು ವ್ಯಾಪ್ತಿಯಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು, ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ 1959 ಕಲಂ (4),



ಕಲಂ (21) ಮತ್ತು ಕಲಂ 24-ಎ(1) ರಡಿ ಸಂಡೂರು ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಶಸ್ತ್ರಾಸ್ತ್ರದಾರರ ಶಸ್ತ್ರಾಸ್ತ್ರ (ಫೈರ್ ಆರ್ಮ್ಸ್)ಗಳನ್ನು (ರಾಷ್ಟ್ರೀಕೃತ ಬ್ಯಾಂಕ್‌ಗಳು, ರಿಸರ್ವ್ ಬ್ಯಾಂಕ್ ಅವರಿಂದ ಅನುಮೋದಿಸಿದ ಶೆಡ್ಯೂಲ್ ಬ್ಯಾಂಕ್‌ಗಳ ಸೆಕ್ಯೂರಿಟಿ ಗಾರ್ಡ್‌ಗಳ ಆಯುಧಗಳನ್ನು ಹೊರತುಪಡಿಸಿ) ತಕ್ಷಣದಿಂದಲೇ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ನ.25 ರ ವರೆಗೆ ಠೇವಣಿ ಮಾಡುವಂತೆ ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಸಂಡೂರು ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸಂಡೂರು ತಾಲ್ಲೂಕು, ವೇಣಿ ವೀರಾಪುರ, ಕುಡತಿನಿ (ಬಳ್ಳಾರಿ ತಾಲ್ಲೂಕು), ತಿಮ್ಮಲಾಪುರ, ಏಳುಬೆಂಚಿ (ಕುರುಗೋಡು ತಾಲ್ಲೂಕು) ವ್ಯಾಪ್ತಿಯ ಶಸ್ತ್ರಾಸ್ತ್ರದಾರರು ತಮ್ಮ ಶಸ್ತ್ರಾಸ್ತ್ರಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ರವರೆಗೆ ಠೇವಣಿ ಮಾಡಬೇಕು.

**ಸೂಚನೆ:** ಸಾರ್ವಜನಿಕರು ಪಡೆದ 'ಪರವಾನಗಿ ಪಡೆದ ಶಸ್ತ್ರಾಸ್ತ್ರಗಳ ಠೇವಣಿ' ಯಿಂದ ವಿನಾಯಿತಿ ಪಡೆಯಲು ಬಯಸುವವರು ಅ.22 ರೊಳಗಾಗಿ ತಮ್ಮ ಮನವಿಗಳನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದು. ಸಾರ್ವಜನಿಕರಿಂದ ಸ್ವೀಕೃತವಾದ ಮನವಿಗಳನ್ನು "ಸ್ಕ್ರೀನಿಂಗ್ ಕಮಿತಿ" ಯಲ್ಲಿ ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಕಮಿಟಿಯ ನಿರ್ಣಯವು ಅಂತಿಮವಾಗಿರುತ್ತದೆ.

ಸಿ.ಆರ್.ಪಿ.ಸಿ ಕಾಯ್ದೆ 1973 ಕಲಂ 144 ರಡಿ ಯಾವುದೇ ಶಸ್ತ್ರಾಸ್ತ್ರ ಪರವಾನಿಗೆದಾರರು ತಮ್ಮ ಶಸ್ತ್ರಾಸ್ತ್ರವನ್ನು ಚುನಾವಣೆ ಸ್ಥಳ ಮತ್ತು ಸಾರ್ವಜನಿಕ ಸ್ಥಳದಲ್ಲಿ ಹೊತ್ತೊಯ್ಯುವುದು ಮತ್ತು ಪ್ರದರ್ಶನ ಮಾಡುವುದನ್ನು ನಿಷೇಧಿಸಿದೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

# ಡಾ. ಕೆ ಶಿವರಾಂ ಕಾರಂತ್ ಪರಿಚಯ ಮತ್ತು ಸಾಧನೆ

ಕಡಲತೀರದ ಭಾರ್ಗವ, ನಡೆದಾಡುವ ವಿಶ್ವಕೋಶ ಎಂದೇ ಕರೆಯಲ್ಪಡುವ ಜ್ಞಾನಪೀಠ ಪುರಸ್ಕೃತರಾದ ಡಾಕ್ಟರ್ ಕೋಟ ಶಿವರಾಂ ಕಾರಂತರು ಉಡುಪಿ ಜಿಲ್ಲೆಯ ಕೋಟ ಎಂಬ ಗ್ರಾಮದಲ್ಲಿ 10 ಅಕ್ಟೋಬರ್ 1902ರಲ್ಲಿ ಕೋಟ ಶೇಷ ಕಾರಂತ್ ಮತ್ತು ಲಕ್ಷ್ಮಿ ಅಮ್ಮನವರ ಮಗನಾಗಿ ಜನಿಸಿದರು. ಇವರು ತಮ್ಮ ಶಿಕ್ಷಣವನ್ನು ಕುಂದಾಪುರ ಮತ್ತು ಮಂಗಳೂರಿನಲ್ಲಿ ಮುಗಿಸಿದರು. ಕಾರಂತರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಗಾಂಧೀಜಿಯವರ ಅಸಹಕಾರ ಚಳುವಳಿಯ ಕರೆಯ ಬಗ್ಗೆ ಪತ್ರಿಕೆಯಲ್ಲಿ ಓದಿದ ತಕ್ಷಣವೇ, ತಮ್ಮ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಇವರು ಗಾಂಧಿವಾದದಲ್ಲಿ ಸಾಕಷ್ಟು ಪ್ರಭಾವಿತರಾಗಿದ್ದರು.

ಕಾರಂತರು 5 ವರ್ಷಗಳ ಕಾಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಾಯಕ ಕಾರ್ನಾಡ್ ಸದಾಶಿವ ರಾವ್ ನೇತೃತ್ವದಲ್ಲಿ ಕರ್ನಾಟಕದಲ್ಲಿ ಖಾದಿ ಮತ್ತು ಸ್ವದೇಶಿ ಪ್ರಚಾರವನ್ನು ನಡೆಸಿದರು. ಆ ಸಮಯದಲ್ಲಾಗಲೇ ಅವರು ಕಾದಂಬರಿ ಮತ್ತು ನಾಟಕಗಳನ್ನು ಬರೆಯಲು ಪ್ರಾರಂಭಿಸಿದ್ದರು.

ಕಾರಂತರು ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ, ರಾಜಕೀಯ, ನಾಟಕ ಸಿನಿಮಾ ,ಪರಿಸರ, ಯಕ್ಷಗಾನ, ಪತ್ರಿಕೋದ್ಯಮ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹಾಗಾಗಿ ಇವರನ್ನು ಡಾಕ್ಟರ್ ಹಾ.ಮಾ ನಾಯಕ್ ರವರು "ಯಾವ ಮಾನದಂಡದಿಂದ ಅಳೆದರೂ ಕಾರಂತರು ವಿಶ್ವ ಲೇಖಕರ ಪಟ್ಟಿಯಲ್ಲಿ ಸೇರುವ ಮಹಾನ್ ಲೇಖಕ" ಎಂದು ಬಣ್ಣಿಸಿರುವುದು ವಾಸ್ತವಕ್ಕೆ ಕನ್ನಡಿ ಹಿಡಿದಂತಿದೆ.

ಆಡು ಮುಟ್ಟದ ಸೊಪ್ಪಿಲ್ಲ ಕಾರಂತರು ರಚಿಸಿದ ಸಾಹಿತ್ಯದ ಪ್ರಕಾರವಿಲ್ಲ ಎನ್ನುವಂತೆ ಕಾರಂತರು ಕಾವ್ಯ ,ಕಾದಂಬರಿ, ಸಣ್ಣ ಕಥೆ, ನಾಟಕ, ಹರಟೆ, ವಿಶ್ವಕೋಶ, ಶಿಶು ಸಾಹಿತ್ಯ, ವ್ಯಂಗ್ಯ, ಪ್ರಬಂಧ, ತಾತ್ವಿಕ ಸಾಹಿತ್ಯ, ಜೀವನ ಚರಿತ್ರೆ, ವಿಡಂಬನೆ, ಕಲಾ ಸಾಹಿತ್ಯ, ಜಾನಪದ, ಯಕ್ಷಗಾನ, ವಾಸ್ತು ಶಿಲ್ಪ, ನೃತ್ಯ, ಪ್ರವಾಸ, ವಿಚಾರ ಸಾಹಿತ್ಯ, ಪಠ್ಯಪುಸ್ತಕ, ಪತ್ರಿಕೋದ್ಯಮ, ಅನುವಾದ ಪರಿಸರ ಸಾಹಿತ್ಯ, ಅರ್ಥಕೋಶ, ಅನುವಾದ ಸಂಪಾದನೆ.... ಸೇರಿದಂತೆ ಎಲ್ಲಾ ಪ್ರಕಾರದ ಸಾಹಿತ್ಯದಲ್ಲೂ ತಮ್ಮ ಛಾಪನ್ನು ಮೂಡಿಸಿದ್ದಾರೆ.


ಕಾರಂತರು ನೃತ್ಯ ಕಲಿಸುತ್ತಿದ್ದ ಮತ್ತು ನಾಟಕಗಳನ್ನು ನಿರ್ದೇಶಸುತ್ತಿದ್ದ ಶಾಲೆಯಲ್ಲಿನ ವಿದ್ಯಾರ್ಥಿನಿಯಾದ ಲೀಲಾ ಆಳ್ವರನ್ನು ವಿವಾಹವಾಗಿ ವೈವಾಹಿಕ ಜೀವನವನ್ನು ಪ್ರಾರಂಭಿಸಿದರು. ಈ ದಂಪತಿಗಳಿಗೆ ನಾಲ್ಕು ಜನ ಮಕ್ಕಳಿದ್ದಾರೆ. ಕಾರಂತರ ಯಶಸ್ಸಿಗೆ ಹಾಗೂ ಅವರು ಮಾಡುತ್ತಿದ್ದ ಎಲ್ಲಾ ಕೆಲಸಗಳಿಗೆ ಅವರ ಶ್ರೀಮತಿ ಬೆನ್ನೆಲುಬಾಗಿರುತ್ತಿದ್ದರು.

ಕಾರಂತರು ಯುವಕರಾಗಿದ್ದ ಸಮಯದಲ್ಲಿ ಅನೇಕ ವೈಶ್ಯವಿವಾಹವನ್ನು ಮಾಡಿಸಿ ಸಮಾಜ ಸುಧಾರಣೆಗೆ ಕಂಕಣ ಕಟ್ಟಿದ್ದರು. ಇವರಿಗೆ ಪರಿಸರದ ಬಗ್ಗೆ ಅಪಾರವಾದ ಕಾಳಜಿ ಇತ್ತು. ಪರಿಸರದ ಉಳಿವಿಗಾಗಿ ಕೈಗಾ ಅಣು ವಿದ್ಯುತ್ ಸ್ಥಾವರ ಸ್ಥಾಪನೆಯ ವಿರುದ್ಧದ ಹೋರಾಟದಲ್ಲಿ ನಾಯಕತ್ವವನ್ನು ವಹಿಸಿದ್ದರು.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ
Scan For Digital Colourful
HAMPI TIMES E-paper

ಒಬ್ಬ ಸಾಹಿತ್ಯಾಸಕ್ತ ಜೀವಮಾನವಿಡಿ ಅಧ್ಯಯನ ಮಾಡಬಲ್ಲಷ್ಟು ವಿಷಯ ವಿಚಾರಗಳನ್ನು ಕಾರಂತರು ಬರೆದಿದ್ದಾರೆ. ಅವರ ಬದುಕು ಹಾಗೂ ಬರಹ ಬೇರೆಯಲ್ಲ. ಜೀವನದಲ್ಲಿ ಒಬ್ಬ ವ್ಯಕ್ತಿ ಇಷ್ಟೆಲ್ಲ ಮಾಡಲು ಸಮಯವನ್ನು ಹೊಂದಿಸಲು ಸಾಧ್ಯವೇ ಎನ್ನುವ ಪ್ರಶ್ನೆ ಮನಸ್ಸಿನಲ್ಲಿ ಮೂಡುವುದು ಸಹಜ. ಅದಕ್ಕೆ ಡಾ. ಕೋಟ ಶಿವರಾಮ ಕಾರಂತರು "....ನಾನು ಸಮಯದ ಅಭಾವವನ್ನು ಕುರಿತು ಎಂದೂ ನೆಪ ಹೇಳಿದವನಲ್ಲ. ಪ್ರತಿದಿನ ರಾತ್ರಿ ನಾನು ಒಂಭತ್ತು ತಾಸುಗಳ ನಿದ್ದೆ ಸಾಲದೆ ಹಗಲು ಸಹ ಒಂದು ತಾಸು ನಿದ್ದೆ ಮಾಡುತ್ತೇನೆ. ಅಥವಾ ಮನಸ್ಸು ಬಂದರೆ ಇನ್ನೂ ತುಸು ಹೆಚ್ಚಾಗಿ ನಿದ್ದೆ ಮಾಡುವಷ್ಟು ಅವಕಾಶವಿದೆ ಎಂದು ತಿಳಿದಿದ್ದೇನೆ. ಸಮಯ ಸಾಲದೆಯೆ ನನ್ನ ಯಾವ ಕೆಲಸವೂ ಈ ತನಕ ಕೆಟ್ಟದ್ದು ಕಾಣಿಸುವುದಿಲ್ಲ. ನನಗಿರುವ ಕಷ್ಟ ? ಕೈಯಲ್ಲಿ ಒಂದಲ್ಲ ಒಂದು ಕೆಲಸವಿಲ್ಲದಿದ್ದರೆ ಸಮಯ ಕಳೆಯುವುದು ಹೇಗೆ ಎಂಬ ಚಿಂತೆ! ಇಂಥದೇ ನಿಶ್ಚಿತ ಕೆಲಸವನ್ನು ಮಾಡಬೇಕು ಎಂದು ಮನಸ್ಸಿಗೆ ಹೊಳೆಯದೆ ಹೋಯಿತಾದರೆ ಒಂದಲ್ಲ ಒಂದು ಪುಸ್ತಕವನ್ನು ತೆರೆದು ಓದಲು ಎತ್ತಿಕೊಳ್ಳುತ್ತೇನೆ. ಅದಕ್ಕಾಗಿ ಆಗಾಗ ಒಳ್ಳೆಯ ಪುಸ್ತಕ ತರಿಸಿಕೊಳ್ಳುತ್ತೇನೆ. ಅದಕ್ಕೆ ವಿಷಯಗಳ ಗೊತ್ತು ಗುರಿಯಿಲ್ಲ. ಹಾಗೆ ತರಿಸಿಕೊಂಡು ಓದಿದ ಪುಸ್ತಕಗಳಲ್ಲಿ ಕೆಲವು ರುಚಿಸುತ್ತವೆ. ಕೆಲವು ರುಚಿಸುವುದಿಲ್ಲ. ಒಳ್ಳೆಯ ಪುಸ್ತಕಗಳು ಕೈಗೆ ಸಿಕ್ಕಿದರೆ ? ಆಗ ಬೇರೊಂದೇ ಚಿಂತನೆ ಮೂಡುತ್ತದೆ. ಮಾಡಬಹುದಾದ ಕೆಲಸಗಳು ವಿಪುಲವಾಗಿವೆ. ಸಮಯವೂ ಧಾರಾಳವಾಗಿದೆ. ಬದುಕಿಗೂ, ಮಾನವೀಯ ಚಟುವಟಿಕೆಗಳಿಗೂ ನಿಕಟ ಸಂಬಂಧವಿದೆ ಎಂಬುದು ನನ್ನ ತಿಳಿವು. ನಾವು ಬದುಕಿದ್ದೇವೆ ? ಎಂದು ಅನಿಸಿ



ಕೊಳ್ಳುವುದಕ್ಕಾದರೂ ನಮಗೆ ಒಂದಲ್ಲ ಒಂದು ಚಟುವಟಿಕೆ ಬೇಕೇ ಆಗುತ್ತದೆ. ಆ ಚಟುವಟಿಕೆಯೇ ನಮ್ಮ ಮನಸ್ಸಿನ ಅಭಿರುಚಿಗೆ ಒಗ್ಗಿದ ಒಂದು ಕೆಲಸ ಅನಿಸಿದರಾಯಿತು" ಎಂದು ಮನೋಜ್ಞವಾಗಿ ಹೇಳುತ್ತಾರೆ.

"ಇದ್ದ ಬುದ್ಧಿಯನ್ನು ಬಳಸಿ, ಸಾಧ್ಯವಾದರೆ ಬೆಳೆಸಿ" ಎಂದು ಹೇಳುತ್ತಿದ್ದ ಕಾರಂತರು ಬಹುಮುಖ ಪ್ರತಿಭೆಯುಳ್ಳ ಅದಮ್ಯ ಚೇತನರು. ಕಾರಂತರು ಮಕ್ಕಳಲ್ಲಿದ್ದ ಪ್ರತಿಭೆಯನ್ನು ಅರಳಿಸುವ ಉದ್ದೇಶದಿಂದ ಶಿಕ್ಷಣ ಕೇಂದ್ರವನ್ನು ತೆರೆದಿದ್ದರು ಅಲ್ಲದೆ ತರಂಗ ಸಾಪ್ತಾಹಿಕದ ಬಾಲವನದಲ್ಲಿ ಮಕ್ಕಳು ಕಳುಹಿಸುತ್ತಿದ್ದ ವಿಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಸರಳವಾಗಿ ಉತ್ತರಿಸುತ್ತಿದ್ದರು. ಮಕ್ಕಳ ಶಿಕ್ಷಣದ ಬಗ್ಗೆ ಅಪಾರ ಆಸಕ್ತಿ ಇದ್ದ ಕಾರಂತರು ಮಕ್ಕಳಿಗಾಗಿ ಸಾಹಿತ್ಯ ರಚನೆ ಮಾಡಿ ಪ್ರೀತಿಯ "ಕಾರಂತಜ್ಜ" ಎಂದೇ ಪ್ರಖ್ಯಾತರಾದರು.

ಪುತ್ತೂರಿನಲ್ಲಿ ಒಂದು ಮುದ್ರಣಾಲಯ ತೆರೆದು ಪುಸ್ತಕಗಳ ಮುದ್ರಣ ಮಾಡುವುದರೊಂದಿಗೆ ತಮ್ಮ ಕಾದಂಬರಿಗಳಿಗೆ ತಾವೇ ಮುಖಪುಟ ಚಿತ್ರವನ್ನು ಬರೆಯುತ್ತಿದ್ದರು.

1925ರಲ್ಲಿ "ವಸಂತ"ಎಂಬ ಮಾಸಪತ್ರಿಕೆಯನ್ನು ಆರಂಭಿಸಿದ ಕಾರಂತರು ಅದರ ಸಂಪಾದಕರಾಗಿ ಸುಮಾರು ಐದು ವರ್ಷಗಳ ಕಾಲ ದುಡಿದರು. ಇವರ ಮೊದಲ ಕಾದಂಬರಿ "ವಿಚಿತ್ರಕೂಟ" ಇದೇ ಪತ್ರಿಕೆಯ ಮೂಲಕ ಬೆಳಕಿಗೆ ಬಂದಿತ್ತು. ಕಾರಣಾಂತರಗಳಿಂದ ಆ ಪತ್ರಿಕೆ ನಿಂತು ಹೋದ ಬಳಿಕ "ವಿಚಾರಮಣಿ" ಎಂಬ ಮತ್ತೊಂದು ಪತ್ರಿಕೆಯನ್ನು ಪ್ರಾರಂಭಿಸಿದರು ಅದು ಕೂಡ ಬಹಳ ಕಾಲ ಉಳಿಯಲಿಲ್ಲ. ಹರಿಜನೋದ್ಧಾರರ, ಅಸಹಕಾರ ಚಳುವಳಿಯಲ್ಲಿ ಪಾಲ್ಗೊಳ್ಳುವಿಕೆ, ಸ್ವಾತಂತ್ರ್ಯ ಚಳುವಳಿಗಳಲ್ಲಿ, ನೃತ್ಯ ಸಂಗೀತ ಹೀಗೆ ಅನೇಕ ರಂಗಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ.

98 ವರುಷಗಳ ಕಾಲ ಬಾಳಿದ ಕಾರಂತರು ತಮ್ಮ ಜೀವಿತಾವಧಿಯಲ್ಲಿ 427 ಪುಸ್ತಕವನ್ನು ಬರೆದಿದ್ದಾರೆ. ನಮ್ಮ 96 ನೆಯ ವಯಸ್ಸಿನಲ್ಲಿ ಹಕ್ಕಿಗಳ ಕುರಿತು ಒಂದು ಪುಸ್ತಕವನ್ನು ಬರೆದಿದ್ದು ವಿಶ್ವ ದಾಖಲೆಗೆ ಅರ್ಹವಾಗಿರುವ ಸಾಧನೆಯಾಗಿದೆ. ವಿಜ್ಞಾನ ಪ್ರಪಂಚ, ಬಾಲ ಪ್ರಪಂಚ, ಯಕ್ಷಗಾನ, ಬಯಲಾಟ, ಸಿರಿಗನ್ನಡ, ಅರ್ಥಕೋಶ, ಹುಚ್ಚು ಮನಸ್ಸಿನ ಹತ್ತು ಮುಖಗಳು, ಮೂಕಜ್ಜಿಯ ಕನಸುಗಳು, ಚೋಮನ ದುಡಿ ಮುಂತಾದ ಕೃತಿಗಳು ಕನ್ನಡ ಸಾಹಿತ್ಯ ಪ್ರಪಂಚದ ಉತ್ಕೃಷ್ಟವಾದ ಕೃತಿಗಳಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತ ಗಳಿಸಿವೆ.

ಕರಾವಳಿಯ ಪ್ರಮುಖ ಜಾನಪದ ಕಲೆಯಾದ ಯಕ್ಷಗಾನದ ಉಳಿವಿಗಾಗಿ ಕಾರಂತರು ತಮ್ಮದೇ ಆದ ತಂಡವನ್ನು ಕಟ್ಟಿಕೊಂಡು ಸ್ವತಃ ಅವರೇ ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುವ ಮೂಲಕ ಹಲವು ಪ್ರಯೋಗಗಳನ್ನು ಮಾಡಿ ದೇಶ ವಿದೇಶಗಳಲ್ಲಿ ಯಕ್ಷಗಾನದ ಕಂಪನ್ನು ಪಸರಿಸಿದ್ದಾರೆ. ಯಕ್ಷಗಾನದ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಅಂಶಗಳ ಬಗ್ಗೆ ಆಸಕ್ತಿವಹಿಸಿದ ಮೊದಲ ವ್ಯಕ್ತಿ ಶಿವರಾಂ ಕಾರಂತರವರು.

ಹೊಸ ಹೊಸ ಪ್ರಯೋಗಗಳಿಗೆ ಹೆಸರಾಗಿರುವ ಕಾರಂತರು ಮೂಕಿ ಚಿತ್ರ ನಿರ್ಮಾಣ ಮಾಡುವ ಮೂಲಕ ಹರಿಜನರ ಬದುಕನ್ನು ಆಧರಿಸಿದ್ದ "ಡೊಮ್ಮಿಂಗೋ" ಚಿತ್ರವನ್ನು ತಾವೇ ಚಿತ್ರಕರಿಸಿ ಅಭಿನಯಿಸಿ ನಿರ್ದೇಶನ ಮಾಡಿ ಕನ್ನಡ ಚಿತ್ರರಂಗದಲ್ಲಿ ಕೂಡ ಪ್ರಯೋಗಗಳನ್ನು ಮಾಡಿದ್ದಾರೆ. ಭೂತರಾಜ ಎಂಬ ಮೂಕಿ ಚಿತ್ರಗಳನ್ನು ಕೂಡ ನಿರ್ಮಿಸಿದರು. ಇವರ ಕುಡಿಯರ ಕೂಸು, ಚಿಗುರಿದ ಕನಸು, ಚೋಮನ ದುಡಿ, ಬೆಟ್ಟದ ಜೀವ, ಮೂಕಜ್ಜಿಯ ಕನಸು ಕಾದಂಬರಿಗಳು ಚಿತ್ರಗಳಾಗಿವೆ.

ಕಾರಂತರನ್ನು ಅಲಂಕರಿಸಿರುವ ಪ್ರಶಸ್ತಿ ಗೌರವಗಳು ಅನೇಕ. ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಗೌರವ ಫೆಲೋಶಿಪ್, ಹಲವಾರು ವಿಶ್ವ ವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್, ಜಾನಪದ ನೃತ್ಯ ಕಲೆಗೆ ಮೀಸಲಾದ ಸ್ವೀಡಿಷ್ ಅಕಾಡೆಮಿಯ ಬಹುಮಾನ ಪದಕ, 'ಮೂಕಜ್ಜಿಯ ಕನಸುಗಳು' ಕಾದಂಬರಿಗೆ 'ಭಾರತೀಯ ಜ್ಞಾನಪೀಠ ಪ್ರಶಸ್ತಿ, ತುಳಸಿ ಸಂಮಾನ್ ಪ್ರಶಸ್ತಿ, 'ಮೈ ಮನಗಳ ಸುಳಿಯಲ್ಲಿ' ಕೃತಿಗೆ ಪಂಪ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ (ತುರ್ತು ಪರಿಸ್ಥಿತಿಗೆ ಪ್ರತಿಭಟನೆಯಾಗಿ ಹಿಂದಿರುಗಿಸಿದರು), 'ಚೋಮನ ದುಡಿ' ಚಲನಚಿತ್ರಕ್ಕೆ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿ, ಯಕ್ಷಗಾನ ಪ್ರದರ್ಶನಗಳಿಗೆ ಜಪಾನಿನ ಡಾನ್ಸ್ ಕ್ರಿಟಿಕ್ಸ್ ಸೊಸೈಟಿ ಪ್ರಶಸ್ತಿ, ಇಂದಿರಾಗಾಂಧೀ ರಾಷ್ಟ್ರೀಯ 'ವೃಕ್ಷ ಮಿತ್ರ' ಪ್ರಶಸ್ತಿ ಮೊದಲಾದವು ಕಾರಂತರ ಬಹುಮುಖ ಸಾಧನೆಗೆ ಕಳಶಪ್ರಾಯವಾಗಿದೆ.

ಟೆಹರಾನಿನಲ್ಲಿ ಜರುಗಿದ ಯುನೆಸ್ಕೊ ಶಿಕ್ಷಣ ಸಮ್ಮೇಳನದಲ್ಲಿ ಕಾರಂತರು ಭಾರತದ ವಿಶೇಷ ಪ್ರತಿನಿಧಿಯಾಗಿ ಭಾಗವಹಿಸಿದರು. ಕನ್ನಡ ಸಾಹಿತ್ಯ ಸಮ್ಮೇಳನ, ವಿಶ್ವ ಕನ್ನಡ ಸಮ್ಮೇಳನದ ಅಧ್ಯಕ್ಷತೆಯೂ ಸೇರಿದಂತೆ ಹಲವಾರು ಮಹತ್ವದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಮ್ಮೇಳನಗಳ ಅಧ್ಯಕ್ಷಪೀಠಕ್ಕೆ ಆಹ್ವಾನಿಸಲ್ಪಟ್ಟಿದ್ದರು. ಯೂರೋಪ್, ಜಪಾನ್ ಗಳಲ್ಲಿ ಇವರ ಯಕ್ಷಗಾನ ಪ್ರದರ್ಶನಗಳು ಜನ ಮೆಚ್ಚುಗೆ ಗಳಿಸಿದ್ದವು.

ಅದಮ್ಯ ಪ್ರತಿಭೆಯೊಂದಿಗೆ ಆದರ್ಶ ವ್ಯಕ್ತಿತ್ವ ಹೊಂದಿದ್ದ ಕನ್ನಡದ ಅಪೂರ್ವ ಸಾಹಿತಿ ಜ್ಞಾನಪೀಠ ಪುರಸ್ಕೃತರಹದ ಡಾಕ್ಟರ್ ಶಿವರಾಂ ಕಾರಂತರು 9 ಡಿಸೆಂಬರ್ 1997ರಲ್ಲಿ ಪಂಚಭೂತಗಳಲ್ಲಿ ಲೀನರಾದರು. ಕಡಲ ತೀರದ ಭಾರ್ಗವನ್ನು ಸಾಹಿತ್ಯ ಸಾಧನೆ ಎಂದೂ ಅಜರಾಮರ

**ವಿದ್ವಾಂಸಕರ ಪ್ರಕಾರ ಕಾರಂತರು**

* ತೀನಂ ಶ್ರೀಕಂಠಯ್ಯ ನವರು ಶಿವರಾಮ ಕಾರಂತರು ನಮ್ಮ ತಲೆಮಾರಿನ ಕನ್ನಡದ ಕ್ರಾಂತಿ ಪುರುಷರಲ್ಲಿ ಒಬ್ಬರು ಅವರ ಪುಸ್ತಕವನ್ನು ಓದುತ್ತಿದ್ದರೆ ನಿಸರ್ಗವೇ ನಮ್ಮ ಎದುರಿಗೆ ಸುರಳಿ ಬಿಚ್ಚಿಕೊಂಡ ಅನುಭವವಾಗುತ್ತದೆ ಎಂದು ಹೇಳಿದ್ದಾರೆ.
* ಲೋಹಿಯಾ ರವರ ತತ್ವ ಚಿಂತನೆ, ಕುವೆಂಪುರವರ ಕಲಾ ಸೃಷ್ಟಿ, ಕಾರಂತರ ಜೀವನದ ದೃಷ್ಟಿ ಮತ್ತು ಬದುಕಿನಲ್ಲಿ ಪ್ರಯೋಗ ಶೀಲತೆ ಈ ಮೂರೇ ಮುಂಬರುವ ಕಲಾವಿದರಿಗೆ ಕನ್ನಡ ಸಾಹಿತ್ಯ ಸೃಷ್ಟಿಗೆ ಚೈತನ್ಯ ಶಕ್ತಿಯಾಗಬಲ್ಲದು ಎಂದು ಪೂರ್ಣಚಂದ್ರ ತೇಜಸ್ವಿಯವರು ಹೇಳಿದ್ದಾರೆ.
* ಯಾವ ಮಾನದಿಂದ ಅಳೆದರೂ ಕಾರಂತರು ವಿಶ್ವಲೇಖಕರ ಪಟ್ಟಿಯಲ್ಲಿ ಸೇರಬಲ್ಲವರು.ಎಂದು ಡಾಕ್ಟರ್ ಹಾ.ಮ.ನಾಯಕ್ ರವರು ಹೇಳಿದ್ದಾರೆ
* ಶಿವರಾಮ ಕಾರಂತರನ್ನು ನಿಮಗೆ ಪರಿಚಯ ಮಾಡಿಕೊಡುವುದೂ ಒಂದೇ, ನೇಸರನ್ನು ಸೊಡರಿನಿಂದ ತೋರಿಸುವುದೂ ಒಂದೇ.ಎಂದು ಗೋಪಾಲಕೃಷ್ಣ ಅಡಿಗರು ಕಾರಂತರನ್ನು ಬಣ್ಣಿಸಿದ್ದಾರೆ
* ಬೆಟ್ಟ ಕಡಲಿನ ನಡುವೆ ಹುಟ್ಟಿದ ಈ ಚೈತನ್ಯ ಕಡಲಿನಷ್ಟೇ ವಿಸ್ತಾರವಾದ ಅನುಭವಗಳನ್ನು ತಮ್ಮ ಕೃತಿಗಳಲ್ಲಿ ಹಿಡಿದಿರಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಎಂದು ಜಿ ಎಸ್ ಶಿವರುದ್ರಪ್ಪನವರು ಕಾರಂತರನ್ನು ವರ್ಣಿಸಿದ್ದಾರೆ.
* ಕಾರಂತರ ಆತ್ಮಕಥನ "ಹುಚ್ಚು ಮನಸ್ಸಿನ ಹತ್ತು ಮುಖಗಳು" "ಹುಚ್ಚು ಮನಸ್ಸಿನ ಹತ್ತು ಮುಖಗಳು" ಎಂಬುದು ಶಿವರಾಮ ಕಾರಂತರ ಆತ್ಮಕಥೆ. ಈ ಕೃತಿಯು ಕಾರಂತರ ವೈಯಕ್ತಿಕ ಮತ್ತು ಸಾಂಸ್ಕೃತಿಕ ಬದುಕಿನ ಅನೇಕ ಅಂಶಗಳನ್ನು ಒಳಗೊಂಡಿದೆ. ಇದು ಓದುಗರಿಗೆ ಅವರ ಬಾಲ್ಯದಿಂದ ಪ್ರಾರಂಭವಾಗಿ, ಪ್ರೌಢಾವಸ್ಥೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಯಾತ್ರೆಯನ್ನು ತೆರೆದಿಡುತ್ತದೆ.

ಕಾರಂತರು ಜೀವನವನ್ನು ಸಂಪೂರ್ಣವಾಗಿ ಅನುಭವಿಸಿ ಬದುಕಿದಂತವರು. ಅವರ ಬರಹ, ಚಿಂತನ, ವ್ಯಕ್ತಿತ್ವ ಎಲ್ಲವೂ ಅವರ ಬದುಕಿನ ತರಹವೇ ಇದ್ದಿತು. ಬರಹಕ್ಕೂ ಬದುಕಿಗೂ ವ್ಯತ್ಯಾಸವಿಲ್ಲದೆ ಕಾರಂತರು. ಅಪಾರ ಜ್ಞಾನ, ಹತ್ತು ಹಲವು ವಿಷಯಗಳ ಬಗೆಗಿನ ಪ್ರಾವೀಣ್ಯತೆ, ಪಾಂಡಿತ್ಯ. ವಿಜ್ಞಾನದಿಂದ ಯಕ್ಷಗಾನದ ವರೆಗೂ ವಿಶಾಲ ವ್ಯಾಪ್ತಿಯ ಅರಿವಿನ ಹರವು ಇದ್ದಂತಹ ಕಾರಂತರು ತಮ್ಮ ಜೀವನದಲ್ಲೂ ಅದನ್ನೇ ಅಡಿಗಡಿಗೆ ಕಂಡವರು. ಯಶಸ್ಸು ಬಂದಾಗ ಹಿಗ್ಗದೆ, ದುಃಖ ನೋವುಗಳಿಗೆ ಅಂಜದೆ ಸಮಚಿತ್ತತೆಯಿಂದ ಎಲ್ಲವನ್ನೂ ಆಸ್ವಾದಿಸಿ ಬದುಕಿದ ತಮ್ಮ ಮೇಲೆ ಪ್ರಭಾವ ಬೀರಿದ ವಸ್ತುಗಳು, ಕಲಾಕೃತಿಗಳು ಹಾಗೂ ಮನುಷ್ಯರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವ ಕಾರಂತರು, ವಿಶಾಲವಾದ ಜಗತ್ತಿನಲ್ಲಿ ತಾವಿನ್ನೂ ಸಣ್ಣವರೆಂಬ ವಿನೀತ ಭಾವನೆಯನ್ನು ಸದಾ ತೋರಿಸುತ್ತಾರೆ. ಕಾಣದ್ದರ ಬಗ್ಗೆ ಇನ್ನೂ ಕುತೂಹಲ ಇಟ್ಟುಕೊಂಡಿರುವ ಕಾರಂತರು, ತಾವೇ ಹೇಳಿಕೊಳ್ಳುವಂತೆ' ಆಸ್ತಿಕರೂ ಅಲ್ಲ, ನಾಸ್ತಿಕರೂ ಅಲ್ಲ. ಅವರೊಬ್ಬ ಅನಾಸ್ತಿಕರು' ಎಂದು ತಾವೇ ಹೇಳಿಕೊಂಡಿದ್ದಾರೆ. ವ್ಯಕ್ತಿತ್ವದ ಹಲವು ಹತ್ತು ಮುಖಗಳ ಅನುಭವಗಳ ಸಂಕಲನವೇ ಅವರ ಆತ್ಮ ಕಥೆ "ಹುಚ್ಚು ಮನಸ್ಸಿನ ಹತ್ತು ಮುಖಗಳು." ಅವರ ಆತ್ಮಕಥನವನ್ನು ಓದುತ್ತಿದ್ದರೆ ಅವರೇ ನಮ್ಮ ಎದುರಿಗೆ ಬಂದು ವಿವರಿಸುತ್ತಿದ್ದ ಹಾಗೆ ಅನಿಸುತ್ತದೆ.

# ದೀಪಾವಳಿ

ದೀಪಾವಳಿ ಎಂದರೆ ನೆನಪಾಗುವುದು ಆ ದೀಪಗಳ ಸಾಲು ನಕ್ಷತ್ರದಂತೆ ಸಿಡಿಯುವ ಪಟಾಕಿ ಕತ್ತಲೆಯನ್ನು ಮೀರಿದ ಬೆಳಕು ಎಲ್ಲೆಲ್ಲೂ ಜಗಮಗಿಸುವ ಬೆಳಕು. ಹೊಸತನ ಹೊಸ ಹುರುಪು ದೀಪಾವಳಿ ಎಂದರೆ ಹಾಗೇ ಅಲ್ಲವೇ. ಈ ಹಬ್ಬದ ಸಂಭ್ರಮ ದೇಶದಲ್ಲೆಡೆಯೂ ಆಚರಿಸುವರು ವಿದೇಶದಲ್ಲೂ ನೆಲೆಸಿರುವ ಭಾರತೀಯರು ದೀಪಾವಳಿ ವಿದೇಶದಲ್ಲೂ ಆಚರಿಸಿ ಸಂಭ್ರಮಿಸುವರು ದೀಪಾವಳಿ ಎಂದರೆ ಬೆಳಕಿನ ಹಬ್ಬ ಭಾರತೀಯ ಪರಂಪರೆಯ ಪ್ರಮುಖ ಹಬ್ಬಗಳಲ್ಲಿ ಒಂದು.

ಒಂದು ಹಬ್ಬ ಹಲವು ಕತೆಗಳನ್ನೊಳಗೊಂಡಿದೆ. ಶ್ರೀಕೃಷ್ಣ ನರಕಾಸುರನ ಸಂಹರಿದ್ದು ರಾವಣನ ಸಂಹಾರದ ಬಳಿಕ ಶ್ರೀರಾಮ ಸೀತಾ ಸಮೇತನಾಗಿ ಮತ್ತೆ ಅಯೋಧ್ಯೆ ಪ್ರವೇಶಿಸಿದ್ದು, ಬಲಿ ಚಕ್ರವರ್ತಿಯನ್ನು ವಾಮನ ಮೂರ್ತಿ ಪಾತಾಳಕ್ಕೆ ತುಳಿದದ್ದು, ಸಮುದ್ರ ಮಂಥನ ಕಾಲದಲ್ಲಿ ಲಕ್ಷ್ಮಿ ದೇವಿಯ ಜನನವಾಗಿದ್ದು, ಇಂದ್ರನ ಕ್ರೋಧ ರೂಪವಾದ ಮಳೆಯಿಂದ ಗೋವುಗಳನ್ನು ರಕ್ಷಿಸಲು ಶ್ರೀಕೃಷ್ಣ ಗೋವರ್ಧನಗಿರಿಯನ್ನು ಎತ್ತಿ ಹಿಡಿದದ್ದು.. ಎಲ್ಲವೂ ದೀಪಾವಳಿಯ ಜತೆಗೆ ಬೆಸೆದುಕೊಂಡ ಪೌರಾಣಿಕ ಕಥನಗಳು. ಎಲ್ಲ ಕಥೆಗಳ ಆಳದಲ್ಲಿರುವುದು ದುಷ್ಟ ಶಿಕ್ಷಣ-ಶಿಷ್ಟ ರಕ್ಷಣ; ಅಸಹಾಯಕತೆಯ ಕ್ಷಣಗಳಲ್ಲಿ ಕೈಹಿಡಿವ ದೇವರ ದಯೆ. ಎಲ್ಲ ಕಡೆ ಬೆಳಕು ಹರಿಸಿ ಸಂತೋಷ, ಆತ್ಮವಿಶ್ವಾಸ ಹೆಚ್ಚಿಸುವ, ಹೊಸತನ ದೆಡೆಗೆ ತುಡಿಯುವಂತೆ ಮಾಡುವ ಹಬ್ಬ. ಬೆಳಕು ಬರೀ ಕಣ್ಣಿಗಷ್ಟೆ ಅಲ್ಲ. ಮುಚ್ಚಿದ ಮನದ ಬಾಗಿಲೊಳಗೂ ಬೆಳಕಿನ ಕಿರಣಗಳು ಸೋಕುತ್ತವೆ. ಹೊಸ ಬೆಳಕು ಚೆಲ್ಲಿ, ಹಳೆ ನೋವು ಸಂಕಟಗಳನ್ನು ಕಿತ್ತುಹಾಕಿ ಸಂಭ್ರಮಕ್ಕೆ ಅಣಿ ಮಾಡುತ್ತವೆ. ಬೆಳಗುವ ಪ್ರತಿ ದೀಪದಲ್ಲಿ, ದೀಪಗಳು ನಕ್ಷತ್ರಗಳಂತೆ ಮಿಂಚಿ ಸಡಗರ ತುಂಬಿರುವುದು ಮನೆ ಮನಗಳ ಬೆಳಗುವ ಹಬ್ಬವಿದು ಕುಟುಂಬದಲ್ಲಿ ಎಲ್ಲರೂ ಸೇರಿ ಆಚರಿಸುವ ಹಬ್ಬ ಪ್ರತಿ ಮನೆಮನೆಗಳಲ್ಲಿ ಸಂಭ್ರಮದಿಂದ ಸಂಪತ್ತಿನ ಅಧಿದೇವತೆ ಲಕ್ಷ್ಮಿಯನ್ನು ಆರಾಧಿಸುವರು. ದೀಪಾವಳಿ ಹಬ್ಬದಂದು ಮನೆಯ ತುಂಬ ಮತ್ತು ಸುತ್ತ ಮುತ್ತಾ ಹಣತೆಗಳನ್ನು ಹಚ್ಚಿ ಅದರ ಬೆಳಕಿನಲ್ಲಿ ಎಲ್ಲರೂ ಸಂಭ್ರಮಿಸುವುದಾಗಿದೆ. ದೀಪಯತಿ ಸ್ವಂ ಪರಚ ಇತಿ ದೀಪ: ಅಂದರೆ ತಾನು ಬೆಳಗಿ ಇತರರನ್ನು ಬೆಳಗಿಸುವ ಶಕ್ತಿ ಕೇವಲ ದೀಪಕ್ಕೆ ಮಾತ್ರವಿದೆ. ತಮಸೋಮಾ ಜ್ಯೋತಿರ್ಗಮಯ ಎಂಬ ಅರ್ಥದಂತೆ ಅಜ್ಞಾನದ ಕತ್ತಲೆಯಿಂದ ಜ್ಞಾನದ ದಿಕ್ಕಿಗೆ ನಮ್ಮನ್ನು ಕೊಂಡೊಯ್ಯು ವುದೇ ದೀಪವಾಗಿದೆ. ಬೆಳಕಿನ ಹಬ್ಬವೆಂದರೆ ನಮ್ಮೊಳಗೆ ಆವರಿಸಿರುವ ಕತ್ತಲನ್ನು ತೊಲಗಿಸಿಮನೆಮನಗಳನ್ನುಪ್ರಕಾಶಮಯವಾಗಿಸುವುದು ಅದಕ್ಕೆ ಹೇಳುವುದು ಜ್ಯೋತಿಯನ್ನು ಬೆಳಗುವುದಷ್ಟೇ ಅಲ್ಲ ಆತ್ಮಜ್ಯೋತಿಯ ಬೆಳಗುವುದು ಹೊಸತನದ ಚಿಗುರೆಲೆಗಳಾಗಿ ಹಳೆ ಸಂಸ್ಕೃತಿಯ ಗಟ್ಟಿ ಬೇರುಗಳೊಂದಿಗೆ ದೀಪಾವಳಿ ಆಚರಿಸೋಣ. ಮನದಲ್ಲಿ ತೃಪ್ತಿ ಎಂಬ ಪುಟ್ಟ ಹಣತೆ ಹಚ್ಚಿಟ್ಟರೆ ಬದುಕಿನಲಿ ಪ್ರತಿದಿನವೂ ದೀಪಾವಳಿ... ಮನದ ಕತ್ತಲೆಯ ಬೇಲಿ ದಾಟಿ ಬಾ ಮನವೇ ಆಚರಿಸೋಣ ದೀಪಾವಳಿ... ಮನದಲ್ಲಿ ಸತ್ಯವೆಂಬ ದೀಪವ ಬೆಳಗಲಿ ಶಾಂತಿ ನೆಮ್ಮದಿಯು ನೆಲೆಸಲಿ. ಬೆಳಗುತಿವೆ ಮನೆ ಮುಂದೆ ದೀಪದ ಸಾಲು ಬೆಳಗಲಿ ಮನದಲ್ಲಿ ಜ್ಞಾನದ ಮಿಂಚಿನ ಸಾಲು.



ಅಂಜಲಿ ಶ್ರೀನಿವಾಸ
ಹುಬ್ಬಳ್ಳಿ
Scan For Digital Colourful
HAMPI TIMES E-paper



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

**19–10–2024 – ಶನಿವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಭರಣಿ |
| ಯೋಗ | : ಸಿದ್ಧಿ |
| ಕರಣ | : ಗರಜ |
| ಸೂರ್ಯೋದಯ | : 06:26:46 |
| ಸೂರ್ಯಾಸ್ತ | : 17:56:29 |
| ರಾಹು ಕಾಲ | : 09:19–10:45 |
| ಯಮಘಂಡ ಕಾಲ | : 13:38–15:04 |
| ಗುಳಿಕ ಕಾಲ | : 06:27–07:53 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 18–10–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.93 ಅಡಿ |
| ಒಳ ಹರಿವು | 36919 ಕ್ಯುಸೆಕ್ |
| ಹೊರ ಹರಿವು | 36799 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.500 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1612.99 ಅಡಿ |
| ಒಳ ಹರಿವು | 657 ಕ್ಯುಸೆಕ್ |
| ಹೊರ ಹರಿವು | 10534 ಕ್ಯುಸೆಕ್ |
| ಸಾಮರ್ಥ್ಯ | 43.808 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಕನ್ನಡ ರಾಜ್ಯೋತ್ಸವಕ್ಕೆ ಸಿದ್ಧತೆ

## ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ । ಪೂರ್ವಭಾವಿ ಸಭೆ । ನ. 1 ಆಚರಣೆ



■ **ಹಂಪಿ ಟೈಮ್ಸ್ ಕೊಪ್ಪಳ**

ನವೆಂಬರ್ 01ರಂದು ಜಿಲ್ಲಾ ಕೇಂದ್ರದಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ಆಚರಿಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಪ್ಪಳ ಜಿಲ್ಲಾ ಕೇಂದ್ರದಲ್ಲಿ ನವೆಂಬರ್ 01 ರಂದು ಕನ್ನಡ ರಾಜ್ಯೋತ್ಸವ ಆಚರಿಸುವ ಸಂಬಂಧ ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯೋತ್ಸವದಿನದಂದು ಬೆಳಿಗ್ಗೆ 07ಗಂಟೆಗೆ ನಗರದ ತಹಶೀಲ್ದಾರರ ಕಚೇರಿಯಲ್ಲಿ ನಾಡ ದೇವತೆ ಭುವನೇಶ್ವರಿ ದೇವಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ದೇವಿಯ ಭಾವಚಿತ್ರದ ಮೆರವಣಿಗೆ ಅಶೋಕ ವೃತ್ತ, ಕೇಂದ್ರೀಯ ಬಸ್ ನಿಲ್ದಾಣದ ಮಾರ್ಗವಾಗಿ ಜಿಲ್ಲಾ ಕ್ರೀಡಾಂಗಣದವರೆಗೆ ನಡೆಯಲಿದ್ದು, ಮೆರವಣಿಗೆಯಲ್ಲಿ ಕಲಾತಂಡಗಳು ಭಾಗವಹಿಸುವಂತೆ ಹಾಗೂ ಮೆರವಣಿಗೆ ಮತ್ತು ಬೆಳಿಗ್ಗೆ 09 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಲಿರುವ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳು, ತಮ್ಮ ಸಿಬ್ಬಂದಿಗಳೊಂದಿಗೆ ಭಾಗವಹಿಸಬೇಕು. ಕಾರ್ಯಕ್ರಮ ದಿನದಂದು ಭುವನೇಶ್ವರಿ ದೇವಿಯ ಭಾವಚಿತ್ರದ ಮೆರವಣಿಗೆ, ವೇದಿಕೆ ಅಲಂಕಾರ, ಪಥಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯನ್ನು ನಿರ್ವಹಿಸಲು ಹಾಗೂ ಈ ನಿಟ್ಟಿನಲ್ಲಿ ರಚಿಸಲ್ಪಟ್ಟ ಸಮಿತಿಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಬೇಕು ಎಂದರು.

ಜಿಲ್ಲಾ ಕೇಂದ್ರದ ಪ್ರಮುಖ ರಸ್ತೆಗಳು, ವೃತ್ತಗಳ ಸ್ವಚ್ಛತೆ ಹಾಗೂ ಅಲಂಕಾರಕ್ಕೆ ಹಾಗೂ ಕ್ರೀಡಾಂಗಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ನಗರಸಭೆಯಿಂದ ಅಗತ್ಯ ಕ್ರಮ ವಹಿಸಬೇಕು. ಕ್ರೀಡಾಂಗಣದಲ್ಲಿ ಆರೋಗ್ಯ ಇಲಾಖೆಯಿಂದ ತುರ್ತು ಪರಿಸ್ಥಿತಿ ನಿರ್ವಹಣೆಗಾಗಿ ಅಗತ್ಯ ಸಿಬ್ಬಂದಿಯೊಂದಿಗೆ ಅಂಬ್ಯುಲೆನ್ಸ್, ಅಗ್ನಿಶಾಮಕ ಇಲಾಖೆಯಿಂದ ಅಗ್ನಿಶಾಮಕ ವಾಹನ ಒದಗಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕನ್ನಡ ಗೀತೆಗಳಿಗೆ ಮಾತ್ರ ಅವಕಾಶ ನೀಡಬೇಕು. ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಭಾಷಣಕ್ಕಾಗಿ ಇಲಾಖೆಗಳು ಅಗತ್ಯ ಮಾಹಿತಿಯನ್ನು ಸಕಾಲಕ್ಕೆ ನೀಡಬೇಕು ಎಂದು ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಕನ್ನಡ ರಾಜ್ಯೋತ್ಸವದ ವ್ಯವಸ್ಥಿತ ಆಚರಣೆಗಾಗಿ ರಚಿಸಿದ ಸಮಿತಿಗಳು ತಮಗೆ ನೀಡಿದ ನಿರ್ದೇಶನಗಳನ್ವಯ ಕಾರ್ಯ ನಿರ್ವಹಿಸಬೇಕು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮಕ್ಕಳಿಗೆ ಕೆ.ಕೆ.ಎಸ್.ಆರ್.ಟಿ.ಸಿ ಬಸ್ ಸೌಕರ್ಯ ಒದಗಿಸಬೇಕು. ಪಥಸಂಚಲನ ಮತ್ತು ಅದರ ಪೂರ್ವ ತರಬೇತಿಗೆ ಪಾಲ್ಗೊಳ್ಳುವ ಮಕ್ಕಳಿಗೆ ಹಾಲು ಅಥವಾ ಲಘು ಉಪಹಾರ ವಿತರಣೆಗೆ ಅಕ್ಷರ ದಾಸೋಹ ಮತ್ತು ಕ್ರೀಡಾ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಶಾಲಾ ಮಕ್ಕಳಿಂದ ಸಾಮೂಹಿಕ ನೃತ್ಯ, ಸಾಧಕರಿಗೆ ಸನ್ಮಾನ ಹಾಗೂ ಇತರ ಕಾರ್ಯಕ್ರಮಗಳು ಇದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳು ಜಿಲ್ಲಾಡಳಿತಕ್ಕೆ ಹಾಗೂ ಸಂಬಂಧಪಟ್ಟ ಸಮಿತಿಗೆ ಅಕ್ಟೋಬರ್ 25ರೊಳಗಾಗಿ ಮಾಹಿತಿ ನೀಡಬೇಕು ಎಂದರು.

ರಾಜ್ಯೋತ್ಸವ ಪುರಸ್ಕಾರ ನೀಡಲು ಮನವಿ: ಕನ್ನಡ ನೆಲೆ, ಜಲ, ಭಾಷೆ ಸೇರಿದಂತೆ ಕನ್ನಡಕ್ಕಾಗಿ ದುಡಿಯುವ ಕನ್ನಡಾಭಿಮಾನ ಹೊಂದಿದ ಮಹನೀಯರಿಗೆ, ಸಾಹಿತಿಗಳು, ಚಿಂತಕರಿಗೆ ಕರ್ನಾಟ ರಾಜ್ಯೋತ್ಸವ ಸಂದರ್ಭದಲ್ಲಿ ಬೇರೆ–ಬೇರೆ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವಪುರಸ್ಕಾರನೀಡಿಗೌರವಿಸಲಾಗುತ್ತದೆ. ಈ ಪರಂಪರೆಯನ್ನು ಕೊಪ್ಪಳ ಜಿಲ್ಲೆಯಲ್ಲಿಯೂ ಸಹ ಮುಂದುವರೆಸಬೇಕೆಂದು ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷರಾದ ಮಂಜುನಾಥ ಗೊಂಡಬಾಳ ಅವರು ಸಭೆಗೆ ಮನವಿ ಮಾಡಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಂಟಿ ಕೃಷಿ ನಿರ್ದೇಶಕರಾದ ಟಿ.ಎಸ್.ರುದ್ರೇಶಪ್ಪ, ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಜಗದೀಶ್, ಕನ್ನಡ ಮತ್ತು ಸಂಸಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಹಳ್ಳಿ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

# ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಶೈಕ್ಷಣಿಕ ಸಾಲಿಗೆ ಹೊಸಪೇಟೆಯ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಶಾಲೆಯಲ್ಲಿ ಇಂಗ್ಲೀಷ್ ಮತ್ತು ಸಮಾಜ ವಿಜ್ಞಾನ ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಾಗುತ್ತಿದ್ದು, ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅ.23 ಅರ್ಜಿ ಸಲ್ಲಿಸಲು ಕೊನೆಯ ದಿನ.

ನಿಗದಿತ ವಿದ್ಯಾರ್ಹತೆ ಉಳ್ಳವರು ನೇರವಾಗಿ ಶಾಲೆಗೆ ಭೇಟಿ ನೀಡಬಹುದಾಗಿದೆ ಅಥವಾ ತಮ್ಮ ಸ್ವ ವಿವರದ ಮಾಹಿತಿಯನ್ನು ವಾಟ್ಸಾಪ್ ನಂಬರ್ 9741342530 ಗೆ ಕಳುಹಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಮೌಲಾನಾ ಅಜಾದ್ ಮಾದರಿ ಶಾಲೆಯ ಮುಖ್ಯೋಪಾಧ್ಯಾಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 6ನೇ ತರಗತಿ ಪ್ರವೇಶಕ್ಕೆ ಅರ್ಜಿ

■ **ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಶೈಕ್ಷಣಿಕ ಸಾಲಿನ 6ನೇ ತರಗತಿಗೆ ಪ್ರವೇಶಕ್ಕಾಗಿ ಮರಿಯಮ್ಮನಹಳ್ಳಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ದಾಖಲಾತಿ ಪ್ರಾರಂಭವಾಗಿದ್ದು, ಈ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ.

ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ 75 ರಷ್ಟು (ಮುಸ್ಲಿಂ, ಕ್ರೈಸ್ತ, ಸಿಖ್, ಜೈನ್, ಬೌದ್ಧ ಹಾಗೂ ಪಾರ್ಸಿ) ಹಾಗೂ ಇನ್ನುಳಿದ 25 ರಷ್ಟು ಸೀಟುಗಳು ಹಿಂದುಳಿದ ವಿದ್ಯಾರ್ಥಿಗಳಿಗೆ ಮೀಸಲಿದ್ದು, ಆಸಕ್ತ ವಿದ್ಯಾರ್ಥಿಗಳು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ. ಮರಿಯಮ್ಮನಹಳ್ಳಿ ಸಮುದಾಯ ಭವನ ಇಂದಿರಾನಗರ, ಢಣಾಯಕನಕೆರೆ, ಮರಿಯಮ್ಮನಹಳ್ಳಿ ಇಲ್ಲಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ.

ದಾಖಲಾದ ವಿದ್ಯಾರ್ಥಿಗಳಿಗೆ ವಸತಿಯುತ ಉಚಿತ ಶಿಕ್ಷಣ ನೀಡಲಾಗುವುದು ಎಂದು ಅಲ್ಪಸಂಖ್ಯಾತರ ಮೌಲಾನಾ ಅಜಾದ್ ಮಾದರಿ ಶಾಲೆ ಮುಖ್ಯೋಪಾಧ್ಯಾಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅ.19 ರಂದು ವಿದ್ಯುತ್ ಗ್ರಾಹಕರ ಸಂವಾದ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಗ್ರಾಮೀಣ ಜೆಸ್ಕಾಂ ಕಾರ್ಯ ಮತ್ತು ಪಾಲನಾ ಮೋಕಾ ಶಾಖೆ ವ್ಯಾಪ್ತಿಯ ಬರುವ ಎಲ್ಲಾ ವಿದ್ಯುತ್ ಗ್ರಾಹಕರಿಗೆ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ಅ.19 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 01.30 ರವರೆಗೆ ಗೊಲ್ಲರನಾಗೇನಹಳ್ಳಿ ಗ್ರಾಮದ ಪಾಂಡುರಂಗ ದೇವಸ್ಥಾನದ ಆವರಣದಲ್ಲಿ ವಿದ್ಯುತ್ ಗ್ರಾಹಕರ ಸಂವಾದ ಸಭೆ ಆಯೋಜಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹ.ಬೊ.ಹಳ್ಳಿಯಲ್ಲಿ ಪ.ಪಂಗಡದ ಕಲ್ಯಾಣ ಕಚೇರಿ ಸ್ಥಾಪಿಸಿ

## ವಿಜೃಂಭಣೆಯ ವಾಲ್ಮೀಕಿ ಜಯಂತ್ಯುತ್ಸವ । ವಾಲ್ಮೀಕಿ ಮಹಾಸಭಾದ ತಾಲೂಕು ಅಧ್ಯಕ್ಷ ಟಿ.ವೆಂಕೋಬಪ್ಪ ಆಗ್ರಹ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನಲ್ಲಿ ಪ.ಪಂಗಡದ ಕಲ್ಯಾಣ ಕಚೇರಿಯನ್ನು ಪ್ರತ್ಯೇಕವಾಗಿ ಸ್ಥಾಪಿಸಬೇಕು ಎಂದು ವಾಲ್ಮೀಕಿ ಮಹಾಸಭಾದ ತಾಲೂಕು ಅಧ್ಯಕ್ಷ ಟಿ.ವೆಂಕೋಬಪ್ಪ ಒತ್ತಾಯಿಸಿದರು.

ಪಟ್ಟಣದ ವಾಲ್ಮೀಕಿ ಭವನದಲ್ಲಿ ನಡೆದ ವಾಲ್ಮೀಕಿ ಜಯಂತ್ಯುತ್ಸವ ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದರು. ಈಗಾಗಲೆ ಜಿಲ್ಲೆಯ ಬೇರೆಬೇರೆ ತಾಲೂಕುಗಳಲ್ಲಿ ಪ.ಪಂಗಡದ ಕಲ್ಯಾಣ ಕಚೇರಿಯನ್ನು ಪ್ರತ್ಯೇಕವಾಗಿ ಸ್ಥಾಪಿಸಿದೆ. ಆದರೆ, ತಾಲೂಕಿನಲ್ಲಿ ಮಾತ್ರ ಮೀನಮೇಷ ಎಣಿಸ ಲಾಗುತ್ತಿದೆ. ವಾಲ್ಮೀಕಿ ಪೂರ್ಣಗೊಳಿಸಲು ತ್ವರಿತವಾಗಿ ಅನುದಾನ ಒದಗಿಸಬೇಕು. ಈ ಕುರಿತು ಜನಪ್ರತಿನಿಧಿಗಳು ಅಗ್ಯ ಕ್ರಮ ಕೈಗೊಳ್ಳಬೇಕು. ಸಮಾಜದ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿ, ಉನ್ನತ ಹುದ್ದೆ ಅಲಂಕರಿಸುವಂತಾಗಬೇಕು ಎಂದರು.

ಶಾಸಕ ಕೆ.ನೇಮರಾಜ ನಾಯ್ಕ ಮತನಾಡಿ, ವಾಲ್ಮೀಕಿ ಮಹರ್ಷಿಗಳ ಆದರ್ಶ ದೇಶಕ್ಕೆ ಮಾದರಿಯಾಗಿದೆ. ದೇಶದ ಮಹಾನ್ ಗ್ರಂಥವನ್ನು ಕೊಡುಗೆಯಾಗಿ ನೀಡಿದ ಸಮಾಜ ವಾಲ್ಮೀಕಿ ಸಮಾಜ. ಸಮಾಜದ ಭವನದ ಪ್ರಗತಿಗೆ ಅನುದಾನ ನೀಡಲಾಗುವುದು ಎಂದರು.

ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ಮಾತನಾಡಿ, ಆದರ್ಶಪುರುಷರನ್ನು ಕೇವಲ ಒಂದುಜಾತಿಧರ್ಮಕ್ಕೆಸೀಮಿತಗೊಳಿಸುವುದು ಬೇಡ. ರಾಮಾಯಣ ಜೀವನ ಮೌಲ್ಯಗಳನ್ನು ತಿಳಿಸುತ್ತದೆ. ಡಿಜೆ ಸಂಸ್ಕೃತಿಯಿಂದ ಯುವಕರನ್ನು ಹೊರ ಕರೆತರಬೇಕಿದೆ ಎಂದರು. ಉಪನ್ಯಾಸಕ ಮಂಜುನಾಥ ಬೇವಿನಕಟ್ಟಿ ಉಪನ್ಯಾಸ ನೀಡಿದರು. ಇದೇವೇಳೆ ಪುರಸಭೆ ನೂತನ ಅಧ್ಯಕ್ಷ ಮರಿರಾಮಣ್ಣ, ಉಪಾಧ್ಯಕ್ಷ ಅಂಬಿಕಾ ದೇವೇಂದ್ರಪ್ಪ, ಎಚ್.ಹುಡುಚಪ್ಪ, ಸಮಾಜದ ಅಧ್ಯಕ್ಷ ಟಿ.ವೆಂಕೋಬಪ್ಪ ಸೇರಿ ಹಲವರನ್ನು ಸನ್ಮಾನಿಸಲಾಯಿತು. ತಹಸೀಲ್ದಾರ್ ಆರ್. ಕವಿತಾ, ತಾ.ಪಂ.ಇಒ ಡಾ.ಜಿ.ಪರಮೇಶ್ವರ, ಪುರಸಭೆ ಸಮಾಜಕಲ್ಯಾಣ ಇಲಾಖೆ ಅಕಾರಿ ಆನಂದ ಡೊಳ್ಳಿನ, ಜಿ.ಪಂ.ಮಾಜಿ ಸದಸ್ಯ ರೋಗಾಣಿ ಹುಲುಗಪ್ಪ, ತಾ.ಪಂ.ಮಾಜಿ ಸದಸ್ಯ ಚಿಂತ್ರಪಳ್ಳಿ ದೇವೇಂದ್ರಪ್ಪ, ಪುರಸಭೆ ಉಪಾಧ್ಯಕ್ಷೆ ಅಂಬಿಕಾ ದೇವೇಂದ್ರಪ್ಪ, ಸದಸ್ಯ ಜೋಗಿ ಹನುಮಂತಪ್ಪ, ಮುಖಂಡರಾದ ಮಗಿಮಾವಿನಹಳ್ಳಿ ಹುಡಚಪ್ಪ, ಡಿಶ್ ಮಂಜುನಾಥ, ಸೆರೆಗಾರ ಹುಚ್ಚಪ್ಪ, ಬೆಣ್ಣಿಕಲ್ಲು ಹನುಮಂತಪ್ಪ, ಚಿಗರಿ ಮಾರುತಿ, ರೋಗಾಣಿ ಪ್ರಕಾಶ್, ಕೊಳ್ಳಿ ಪ್ರಕಾಶ್, ಹಲ್ಮನಿ ಮಂಜುನಾಥ, ಭರಮಣ್ಣ ನಾಯಕ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಪ್ರಮುಖ ರಸ್ತೆಗಳಲ್ಲಿ ವಾಲ್ಮೀಕಿ ಭಾವಚಿತ್ರದ ಅದ್ದೂರಿ ಮೆರವಣಿಗೆ ನಡೆಸಲಾಯಿತು. ನಟ ಸುದೀಪ್ ಅಭಿಮಾನಿಗಳು ಪೈಲ್ವಾನ್ ಚಿತ್ರದ ಬೃಹತ್ ಭಾವುಗಳೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ರಾಮ, ಲಕ್ಷ್ಮಣ ಮತ್ತು ಆಂಜನೇಯನ ವೇಷಧಾರಿಗಳು ಮೆರವಣಿಗೆಯ ಆಕರ್ಷಣೆಯ ಕೇಂದ್ರವಾಗಿದ್ದರು.



# ಪೋಕ್ಸೋ:ನೇಮಕಾತಿಗೆ ಅರ್ಜಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಪೋಕ್ಸೋ ಕಾಯ್ದೆಯಡಿ ಸಂತ್ರಸ್ತರ ಮಕ್ಕಳಿಗೆ ಬೆಂಬಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅ.26 ಅರ್ಜಿ ಸಲ್ಲಿಸಲು ಕೊನೆಯ ದಿನ. ಅಭ್ಯರ್ಥಿಗಳು ಕನಿಷ್ಠ 3 ವರ್ಷಗಳ ಅನುಭವದೊಂದಿಗೆ ಸಮಾಜ ಕಾರ್ಯ ವಿಷಯದಲ್ಲಿ ಪದವಿ ಹೊಂದಿರಬೇಕು. ಪ್ರತಿ ಪ್ರಕರಣಕ್ಕೆ ರೂ.3000/–ಮಾತ್ರ ಗೌರವಧನ ನಿಗದಿಗೊಳಿಸಲಾಗಿದೆ. ಮಕ್ಕಳ ಆರೈಕೆ ಕೇಂದ್ರದಲ್ಲಿ ಮಕ್ಕಳಿಗೆ ಕೆಲಸ ಮಾಡುವ ಅಧಿಕಾರಿಗಳು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುವ ಯಾವುದೇ ಸಂಸ್ಥೆಯು ಅರ್ಜಿ ಸಲ್ಲಿಸಬಹುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಕ್ಷೇತ್ರ ಕಾರ್ಯವನ್ನು ಮಾಡಲು ಅಪರಾಧ ನ್ಯಾಯ ವ್ಯವಸ್ಥೆಯ ಸಹಾಯ ಮಾಡಲು ತರಬೇತಿ ನೀಡಲಾಗುತ್ತದೆ. ಅರ್ಜಿ ನಮೂನೆಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ. ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಅಕ್ಟೋಬರ್ 26ರ ಸಂಜೆ 5.30 ರೊಳಗಾಗಿ ಕಚೇರಿಗೆ ಮಕ್ಕಳ ರಕ್ಷಣಾ ಘಟಕ, ಬಸವೇಶ್ವರ ಬಡಾವಣೆ, 16 ನೇ ವಾರ್ಡ್, ಸಪ್ತಗಿರಿ ಶಾಲೆ ಹತ್ತಿರ, ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08394–200091 ಗೆ ಸಂಪರ್ಕಿಸಿ.

ಕರ್ನಾಟಕ ಸರ್ಕಾರ
**ಗ್ರಾಮ ಪಂಚಾಯಿತಿ ಕಾರ್ಯಾಲಯ, ಕಡತಿ**
ಫೋನ್: Email :
ಗ್ರಾಪಂಕ/ಕಡತಿ/ಮ.ಗಾ.ನರೇಗಾ. ಕಾಪೌಂಡ್ ವಾಲ್–01/ಟೆಂಡರ್/2024–25
ದಿನಾಂಕ:18/10/2024
**"ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ"**
ಈ ಮೂಲಕ ಪ್ರಚಾರಪಡಿಸುವುದೇನೆಂದರೆ, ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಕಡತಿ ಗ್ರಾಮ ಪಂಚಾಯಿತಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಕ್ರಿಯಾ ಯೋಜನೆಯಡಿ ಅನುಮೋದನೆಯಾದ ಗ್ರಾಮ ಪಂಚಾಯಿತಿಯಿಂದ ಅನುಷ್ಠಾನ ಮಾಡಲಾಗುವ ಕಡತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಂಡಿಕೇರಿ ಗ್ರಾಮದ ಸ.ಕಿ.ಪ್ರಾ.ಶಾಲಾ Compound Wall ನಿರ್ಮಾಣ ಟೆಂಡರ್ ಸಂಖ್ಯೆ: RDPR/2024-25/IND4023/CALL-2 ಟೆಂಡರ್ ಮೊತ್ತ : 629734/– ರೂಗಳಂತೆ ಕೆ.ಟಿ.ಟಿ.ಪಿ ನಿಯಮದಂತೆ, ನೊಂದಾಯಿತ ಅರ್ಹ 4ನೇ ದರ್ಜೆ ಸಿವಿಲ್ ಮೇಲ್ಪಟ್ಟ ಸರಬರಾಜುದಾರರು/ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರನ್ನು ನಿಯಮಗಳಂತೆ ಆಹ್ವಾನಿಸಲಾಗಿದ್ದು, ಆಸಕ್ತರು ತಮ್ಮ ದರ ನಮೂದಿಸಿದ ಟೆಂಡರ್‌ನ್ನು ದಿನಾಂಕ: 19.10.2024 ರಿಂದ 02.11.2024 ಸಂಜೆ 5 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಟೆಂಡರ್ ಪ್ರಕಟಣೆ ವಿವರಗಳನ್ನು ಕಛೇರಿ Visit:https://kppp.karnataka.gov.in ನಲ್ಲಿ ವೀಕ್ಷಿಸಬಹುದು. ಹಾಗೂ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಇ–ಪೋರ್ಟಲ್‌ನಲ್ಲಿ ತಿಳಿಯುವುದು.
ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ, ಕಡತಿ,
ಹರಪನಹಳ್ಳಿ ತಾಲ್ಲೂಕು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

## 10 ನೇ ತರಗತಿ ಹಿಂದಿ ಪ್ರಮುಖ ಪ್ರಶ್ನೆಗಳು

### पाठ का नाम : गिल्लू ( रेखाचित्र )

**I. अनुरूपता :**

1) गिल्लू की प्रिय लता : सोनजुही ::
गिल्लू की प्रिय खाद्य : ----(2022)

2) कौआ : काँव - काँव ::
गिल्लू : --- (2019)

3) गिल्लू की पूँछ : झब्बेदार :: गिल्लू की आँखें : ---- (2019)

4)गुलाब :पौधा :सोनजुही:: ---

5) कोयल : मधुर स्वर :: कौआ : ---------

**II.एक वाक्य में उत्तर लिखिए |**

6) गिलहरी गर्मी के दिनो मे कहाँ लेट जाता था ? (2022)

7) लेखिका ने गिल्लू के घावो पर क्या लगाया ?

8) गिल्लू का प्रिय खाद्य क्या था ?

**III. दो - तीन वाक्यों में उत्तर लिखिए |**

9) लेखिका ने गिल्लू का प्राण कैसे बचाये ? (2019)

10) गिल्लू ने लेखिका की गैरहाजरी में दिन कैसे बिताये ? (2018) (2022)

**IV. तीन-चार वाक्यों में उत्तर लिखिए |**

11) गिल्लू के कार्य- कलाप के बारे में लिखिए |

12) गिल्लू के अंतिम दिनो का वर्णन कीजिए |

### बसंत की सचाई ( एकांकी कहानी )

**I . अनुरूपता :**

1) कश्मीरी सेब : कहानी :: बसंत की सचाई : -----

2) पं राजकीशोर : मालिक :: अमरसिंह : ------

3) रामू : बेईमान :: बसंत :

4) बसंत : अहीर टीला ::पंडित राजकिशो : ---

5) प्रताप : छोटा भाई ::बसंत : -----

**II.एक वाक्य में उत्तर लिखिए |**

6) पंडित राजकिशोर कहाँ रहते थे ?

7) बसंत और प्रताप किसके घर में रहते थे ?

8)बसंत क्या- क्या बेचता था ?

**III. दो - तीन वाक्यों में उत्तर लिखिए |**

9) बसंत राजकिशोर से दो पैसे लेने से क्यो इनकार करता है ? ( April -2022 )

10)बसंत राजकिशोर के पास क्यो नही लौटा ?

**III. दो - तीन वाक्यों में उत्तर लिखिए |**

11) बसंत एक ईमानदार लडका है । कैसे ?
( 2018, 2020, 2022 , June -2023 )

12) पंडित राजकिशोर के मानवीय व्यवहार का परिचय दीजिए ( 2019, April -2023, June -2023 )

### मेरा बचपन ( आत्मकथा )

**I . अनुरूपता :**

1) अब्दुल कलाम की माता : आशियम्मा ::
अब्दुल कलाम के पिता : ----

2) रामनंद शास्त्री : पक्षी लक्ष्मण शास्त्री ::
अब्दुल कलाम :------------

3) जैनुलाबदीन :आशियम्मा :: जलालुद्दीन : --

4) जलालुद्दीन : जीजा :: शम्सुद्दीन : ------

5) गांधीजी : राष्ट्रपिता ::
अब्दुल कलाम :------------

6) कलाम का पक्का दोस्त : रामनंद शास्त्री ::
कलाम के अंतरंग मित्र :-------

7) नौकाएँ बनानेवाले : जलालुद्दीन ::
अखबारोंको वितरण करनेवाले : -----

8) गिल्लू : रेखाचित्र : मेरा बचपन :

**II.एक वाक्य में उत्तर लिखिए |**

9) अब्दुल कलाम जी के बचपन में दुर्लभ वस्तु क्या थी ? ( JUNE -2022 )

10)अब्दुल कलाम बचपन में किस घर में रहते थे ? ( ಈ ಮೇಲಿನ ಪ್ರಶ್ನೆಗಳನ್ನು ಅಭ್ಯಾಸಿಸಿ )

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ